ಇನ್ನಿಲ್ಲವಾದ ಹರವೆ : ಇರುವ ಅವರ ಪ್ರೀತಿಯ ಚೇತನ

ನಮ್ಮೆಲ್ಲರ ಹರವೆ ಈಗ ನಮ್ಮ ನಡುವೆ ಇಲ್ಲ! ಹಸಿವು ಅಸ್ಪೃಶ್ಯತೆಗಳಿಂದ ನೊಂದ ಜನರನ್ನು ತಮ್ಮ ಮೃದು ಮಾತುಗಳಿಂದ ಸಂತೈಸುತ್ತಾ ಎಚ್ಚರಿಸುತ್ತಾ ಸಂಘಟಿಸುತ್ತಾ ಕರ್ನಾಟಕದ ತುಂಬಾ ತಿರುಗಾಡುತ್ತಿದ್ದ ಹರವೆಯವರನ್ನು ಸಾವು ಇಲ್ಲವಾಗಿಸಿದೆ. ಆದರೆ ಸಾವನ್ನು ಮೀರಿದ ಅವರ ಪ್ರೀತಿ ಉತ್ಸಾಹಗಳು ಕರ್ನಾಟಕದ ತುಂಬಾ ತಿರುಗಾಡುತ್ತಲೇ ಇವೆ. ಹಾಗೆ ನೋಡಿದರೆ ನಮ್ಮೆಲ್ಲರ ಹರವೆ ನಮ್ಮ ನಡುವೆ ಇನ್ನೂ ಬದುಕಿದ್ದಾರೆ. —ಸಂಪಾದಕ

ನಮ್ಮ ದೇವಯ್ಯ ಹರವೆ ಕಾಲವಶರಾದರು ಎಂದು ಹೇಳಬೇಕಾಗಿ ಬಂದಿರುವ ಬದುಕಿನ ಕ್ರೌರ್ಯಕ್ಕೆ ನಾವು ತುತ್ತಾಗಿದ್ದೇವೆ. 83 ಜೂನ್ 18ನೆ ದಿನವು, 32 ವಯಸ್ಸನ್ನೂ ಪೂರ್ಣಗೊಳಿಸದ ದೇವಯ್ಯಹರವೆಯನ್ನು ಕಿತ್ತುಕೊಂಡಿತು.

ಈ ಸಾವು ನಮ್ಮ ಯಾರದೂ ಸಾವಿನಂತಿದ್ದು, ನಮ್ಮ ದೇವಯ್ಯ, ಪುಣ್ಯಮಾಡಿದ ಹರವೆ ಮಣ್ಣಿನಲ್ಲಿ ಒಂದಾಗುವಾಗ ನಮ್ಮ ದೇಹದ ಸಾವನ್ನೆ ನಮ್ಮ ಆತ್ಮ ನೋಡುತ್ತಿರುವಂಥ ಏಕತೆಯುದಾಗಿತ್ತು.



ನಮ್ಮ ಹರವೆ ಸ್ವಂತದ ಕಷ್ಟ ನೋವು ಅವಮಾನಗಳನ್ನು ನುಂಗಿ ಅದನ್ನು ಚೆಲುವು ಸಂತೋಷವನ್ನಾಗಿಸುವ ಮಾಯಕಾರರಾಗಿದ್ದರು. ನಮ್ಮ ಸಮಾಜದ ಅಸಮತೆ ಅಮಾನವೀಯತೆ ಯಾತನೆಗಳನ್ನು ಸಮತೆ ಮಾನವೀಯತೆಯನ್ನಾಗಿ ರೂಪಾಂತರ ಮಾಡಲು ಹೊರಟ ಕನಸುಗಾರರಾಗಿದ್ದರು. ಆದರೀಗ ಅವರ ಕನಸು ಮಾತ್ರ ಉಳಿದಿದೆ. ಅವರನ್ನು ಈ ಭೂಮಿ ತನ್ನೊಳಕ್ಕೆ ಸೇರಿಸಿಕೊಂಡಿದೆ. ಈ ಕಠೋರ ವಾಸ್ತವವು ನಮ್ಮನ್ನು ತಬ್ಬಲಿ ಮಾಡಿವೆ.

ಯಾಕೆಂದರೆ ದೇವಯ್ಯಹರವೆ ತಾಯಿಯಂಥ ಹೃದಯ ಉಳ್ಳವರಾಗಿದ್ದರು. ಆ ತಾಯಿ ಹೃದಯಕ್ಕೆ, ದಲಿತಸಂಘದ ತಾಯಿ ಹೃದಯಕ್ಕೆ ಹೃದಯಾಘಾತವಾಗಿದೆ. ನಾವು ತಬ್ಬಲಿಗಳಾಗಿದ್ದೇವೆ. ಹರವೆ ತಮ್ಮ ಕನಸನ್ನು ನಮ್ಮೊಡನೆ ಉಳಿಸಿ ಹೋಗಿದ್ದಾರೆ. ನಾವು ತಬ್ಬಲಿಗಳಾದರೂ ಹರವೆ ಕನಸಿನೊಡನೆ ಇದ್ದೇವೆ. ನಾವು ಉಳಿದಿರುವವರೆಗೂ.

—ದೇವನೂರ ಮಹಾದೇವ

ನಿರೀಕ್ಷಿಸಿ ! ನಿರೀಕ್ಷಿಸಿ ! !

ದಲಿತರು ಮತ್ತು ರೈತಚಳುವಳಿ

ಈ ವಿಶೇಷ ಸಂಚಿಕೆಗೆ ಎಲ್ಲಾ ಸಿದ್ಧತೆಗಳೂ ನಡೆಯುತ್ತಿದ್ದು ಆಗಸ್ಟ್ ತಿಂಗಳಲ್ಲಿ ಬಿಡುಗಡೆಯಾಗುತ್ತದೆ. ಲೇಖನ, ಅನುಭವ, ವರದಿ ಕಳುಹಿಸುವವರು ಕೂಡಲೇ ಕಳುಹಿಸಿಕೊಡಿ.

—ಸಂಪಾದಕ

ಪಂಚಮ

ಸಂಪುಟ : 7 ಜುಲೈ-5, 1983 ಬೆಲೆ: 50 ಪೈಸೆ ಪುಟ ; ೧ ಸಂಚಿಕೆ : 13-14

ಬಾಳ್ಳುಪೇಟೆ ಶಾಂತಿಸಭೆ : "ದಯುವಿಟ್ಟು ಮನುಷ್ಯರಾಗಿ"

ಹಾಸನದ ಬಾಳ್ಳುಪೇಟೆಯ ಸ್ವಾಭಿಮಾನಿ ಕೂಲಿಕಾರ ದಲಿತರು ಜಾತ್ಯಾಂಧ ಪ್ಲಾಂಟರುಗಳ ವಿರುದ್ಧದ ನಾಲ್ಕುತಿಂಗಳ ಸತತ ಹೋರಾಟದಲ್ಲಿ ಅನೇಕ ಹಲ್ಲೆ ದಬ್ಬಾಳಿಕೆ ಕಿರುಕುಳಗಳನ್ನು ಅನುಭವಿಸಿದರೂ ಕೊನೆಗೆ ತಾವೇ ಗೆಲವು ಸಾಧಿಸಿದ್ದಾರೆ. ಹಣ ಕೊಟ್ಟು ಎಲ್ಲವನ್ನೂ ಕೊಳ್ಳಬಹುದೆಂದು ನಂಬಿದ್ದ ಪ್ಲಾಂಟರುಗಳಿಗೆ ಕೊನೆಗೂ ದುಡ್ಡು ಮತ್ತು ದಬ್ಬಾಳಿಕೆಗಳಿಂದ ಮನುಷ್ಯರ ಪ್ರೀತಿಯನ್ನು ಮಾತ್ರ ಕೊಳ್ಳಲಾಗುವುದಿಲ್ಲ ಎಂದು ಮನವರಿಕೆಯಾದಂತಿದೆ.

ಜನತಾ ಸರ್ಕಾರದ ದಲಿತ ಗೃಹ ಮಂತ್ರಿ ಶ್ರೀ ರಮೇಶ ಜಿಗಜಿಣಗಿ, ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ರಮೇಶ ಬಂದಗದ್ದೆ–ಇವರುಗಳು ಈ ಜೂನ್ 21ರಂದು ಜಿನುಗು ಮಳೆಯ ನಡುವೆ ಬಾಳುಪೇಟೆಯಲ್ಲಿ ಮೇಲ್ಜಾತಿ ಪ್ಲಾಂಟರುಗಳ ಮತ್ತು ಕೂಲಿಕಾರ ಹರಿಜನರ ಕೂಡಿಸಿ ಶಾಂತಿಸಭೆ ನಡೆಸಿದರು. ಈ ಸಭೆಯಲ್ಲಿ ಖಾಲಿ ಹೊಟ್ಟೆಯ ದಲಿತರಿಗಿಂತ ಶ್ರೀಮಂತ ದೇಹಗಳ ಪ್ಲಾಂಟರುಗಳೇ ಸೊರಗಿದಂತೆ ಕಂಡರು. ಕಳೆದ ನಾಲ್ಕು ತಿಂಗಳಿಂದ ದಲಿತರ ಮೇಲೆ ಹಾಕಿದ ಬಹಿಷ್ಕಾರ ಮತ್ತು ದಬ್ಬಾಳಿಕೆಗಳಿಂದ ತಾವೇ ನಷ್ಟ ಅನುಭವಿಸಿದಂತೆ ಚಿಂತಿಸುವಂತಿದ್ದರು. ಸ್ವಾಭಿಮಾನದ ಬದುಕಿಗಾಗಿ ದಲಿತರು ಅನ್ನ ನೀರನ್ನೂ ಲೆಕ್ಕಿಸದೆ ಕಳೆದ ನಾಲ್ಕು ತಿಂಗಳಿಂದ ಪ್ಲಾಂಟರುಗಳ ಹಂಗಿನ ಕೂಲಿಯನ್ನೂ ಧಿಕ್ಕರಿಸಿದ್ದರಿಂದ ದಲಿತರ ಕೈಕಾಲು ಬೆವರನ್ನೇ ನಂಬಿರುವ ಪ್ಲಾಂಟರುಗಳ ಕಾಫಿ ಗಿಡಗಳು ಸೊರಗತೊಡಗಿದ್ದವು. ಅವರ ಭರ್ತಿ ಖಜಾನೆಗಳು ಭಯದಿಂದ ತಲ್ಲಣಗೊಂಡಿದ್ದವು.

ಆದ್ದರಿಂದಲೇ ಹಲ್ಲೆಕೋರ ಪ್ಲಾಂಟರುಗಳಿಗೂ ಅಂದು "ಶಾಂತಿ"ಯ ಅಗತ್ಯ ಕಂಡು ಬಂದಿತ್ತು. ಎಲ್ಲವುಗಳಿಂದ ಬೇಸತ್ತಿದ್ದ ಯುವ ಪ್ಲಾಂಟರನೊಬ್ಬ "ನಾವು ಶಾಂತಿ ನೆಲೆಸುವಂತೆ ಮಾಡಲು ಸಿದ್ಧ. ಆದರೆ ಹರಿಜನರು ಈ ಕೂಡಲೇ ಕೂಲಿಗೆ ಬರಬೇಕು" ಎಂದು ಒತ್ತಿಒತ್ತಿ ಕೂಗುತ್ತಿದ್ದುದು ದಲಿತರ ಖಾಲಿ ಹೊಟ್ಟೆಗಳ ಒಳಗೂ ನಗೆ ಮೂಡಿಸುತ್ತಿತ್ತು. ನೂರಾರು ವರ್ಷಗಳಿಂದ ಹೇಳಿದಂತೆ

(ಕೊನೆಯ ಪುಟಕ್ಕೆ)

ನಗು ಮುಖದ ಹಿಂದೆ ನೋವಿನ ಹರವೆ

ಇತ್ತೀಚಿಗೆ ನಾನು ಎಲ್ಲೂ ಸಿಡಿಲೊಡೆದ ಸುದ್ದಿಯನ್ನೂ ಕೇಳಿರಲಿಲ್ಲ. 19-6-83 ರ ಬೆಳಿಗ್ಗೆ ನನ್ನೆದೆಗೆ ಸಿಡಿಲೊಡೆಯಿತು.... ಅದು ಹರವೆಯವರ ಸಾವಿನ ಸುದ್ದಿ. ದಲಿತ ಹೋರಾಟಕ್ಕಾಗಿ ಎಲ್ಲಾ ರೀತಿಯ ರಿಸ್ಕ್ ತೆಗೆದುಕೊಂಡು, ಕಂಡಲ್ಲಿ ಮುಗುಳ್ನಕ್ಕು ಮಾತಾಡಿಸುತ್ತಿದ್ದ ಹರವೆಯವರನ್ನು ಇಂದು 'ಸಾವಿನ ತೋಟದ ಸುಂದರ ಹೂ.... ಅಂತ ನಾ ಎಣಿಸಿರಲಿಲ್ಲ.

ಮೇಲ್ನೋಟಕ್ಕೆ ನಗುತ್ತಲೇ ಇದ್ದ ದೇವಯ್ಯ ಹರವೆಯವರು ಒಳಗೆ ನೋವು, ಅವಮಾನ, ಕೋಪಗಳಿಂದ ಬೇಯುತ್ತಿದ್ದರು. ಇದು ಎಲ್ಲರಿಗೆ ತಿಳಿದಿರಲಿಲ್ಲ. ಕೆಲವೊಮ್ಮೆ ಬಲವಂತವಾಗಿ ನಗುತ್ತಿದ್ದ ಹರವೆಯವರು, ಈ ಮಣ್ಣಿಗೆ ಅನಿವಾರ್ಯವೆಂಬಂತೆ ಹುಟ್ಟಿದ್ದರು.

ನಾನು ಬೇಕಂತ ಬರೆಯುತ್ತಿಲ್ಲ ; ಹರವೆ ನಿಮಗೆ ಗೊತ್ತಿದ್ದರು : ಅಂದು ಅವರ ಹೆಣದ ಹಿಂದೆ ನಾನು ಭಾರದ ಎದೆ ಹೊತ್ತು ಹೋದಾಗ ಇಡೀ ದಿನವೆಲ್ಲ ಮಬ್ಬಾಗಿ, ಆ ದುಃಖ ದುಮ್ಮಾನಗಳ ಘಳಿಗೆಗಳನ್ನು ನೋಡಲು ಸೂರ್ಯ ಹಿಂಜರಿದ. ನನಗೇನೂ ಬೇಕಾಗಿರಲಿಲ್ಲ ಆ ಹರವೆಯೆಂಬ ಗ್ರಾಮದಲ್ಲಿ ಅವರ ಅವ್ವನ ಗೋಳು, ಅಪ್ಪನ ಕೋಪ, ಹಿಂದೆ ಗುಡಿಸಲಾಗಿದ್ದ ಹೆಂಚಿನ ಮನೆ, ಕೊಂಚ ಉಸಿರಾಡುವಂತೆ ಅನುಮಾನ ಹುಟ್ಟಿಸುವ ಕೇರಿ... ....ಅಲ್ಲಿ ಊರ ತಿರುವಿನಲ್ಲಿ· ಗುಡಿಸಲ ಮುಂದಿನ ಅಂಗಳಗಳಲ್ಲಿ ರಸ್ತೆಗಳಲ್ಲಿ, ಕಳ್ಳಿ ಸಾಲಿನಹಿಂದೆ, ಗೊಬ್ಬರದ ಗುಂಡಿಯ ಇಕ್ಕೆಲಗಳಲ್ಲಿ, ಮರಗಳು, ಹೂ, ಗರಿಕೆ ಬೆಳೆದ ಆ ಜಾಗದಲ್ಲಿ ಈ 'ದ್ಯಾವಣ್ಣ' ಹೇಗೆ ಬೆಳೆದು ಬಂದದ್ದಿರಬಹುದು... ....? ಎಂಥ ಅನುಭವಗಳು ಅವರದಾಗಿದ್ದಿರಬಹುದು....? ಎಲ್ಲಿ ಹುಡುಕಿದರೂ ಹರವೆಯವರ ಗುರುತು ನನಗೆ ಕಾಣಲಿಲ್ಲ. ಇದೇ ಹರವೆಯುನ್ನು ನೆನಸಿಕೊಂಡರೆ....ಓ ನೆನಪೇ... ನೀನೆಷ್ಟು ಕ್ರೂರ !

ಅವರ ಕೊನೆಯ ಪುಸ್ತಕದ ಹಿನ್ನುಡಿಯಲ್ಲಿ ಡಾ॥ ವಿ· ಲಕ್ಷ್ಮೀನಾರಾಯಣ "ಬೌದ್ಧಿಕವಾಗಿ ಕುಸಿಯುತ್ತಿರುವ ದಲಿತ ವರ್ಗದಲ್ಲಿ ಹರವೆಯವರು ಭರವಸೆ ಹುಟ್ಟಿಸುತ್ತಾರೆ'' ಎಂದು ಬರೆದಿದ್ದ ನಾ ಓದಿದ ಜ್ಞಾಪಕ. ಕೆಲವೇ ಇಂಥ 'ಭರವಸೆ' ಯ ತಲೆಗಳಲ್ಲಿ ಒಂದನ್ನು ನಾವು ಕಳಕೊಂಡೆವು. ಆ ಜಾಗ ತುಂಬುವ ಕೆಲಸ ನಮ್ಮ ದಲಿತರಲ್ಲಾಗಬಹುದೆ ? ಹಾಗಾಗದಿರಕೂಡದು. ಮಾನಸಿಕವಾಗಿ ಇಂಥ ನಿರ್ಧಿಷ್ಟವಾಗಿ, ಅತ್ಯುನ್ನತವಾಗಿ ಸಾವಿರಾರು ಹೂಗಳು ಅರಳುವುದಾದರೆ........ ಈ ಹುಡುಕಾಟದ ಕುತೂಹಲದಿಂದಾಗಿ, ನಿರೀಕ್ಷೆಯ ಈ ಎರಡು ಮಾತುಗಳನ್ನು ಬರೆಯಬೇಕಾಯಿತು. ಹರವೆ ಸತ್ತರೆಂದು ಅಳುತ್ತಾ ಕೂರುವವರು ದಲಿತ ಹೋರಾಟ ಕಣದಲ್ಲಿ ಗಟ್ಟಿಯಾಗದಿದ್ದರೆ ಒಂದೆರಡು ಅಪ್ಪಟ ಕಣ್ಣೀರಿಡದಷ್ಟೇ ಅನ್ಯಾಯವಾಗುತ್ತದೆ.

—ಸೋಗಳ್ಳಿ ನಿಂಗನಾಯಕ್

ಗೆಳೆಯ ಹರವೆ

ಸಾವಿನ ಕತ್ತಲೆಯಲ್ಲಿ ಮಾಯವಾದ ಗೆಳೆಯ
ಮಾತಾಡದೆ ಮಣ್ಣಿಗೆ ಹೋದ ನಮ್ಮ ಜೀವಮಿತ್ರ
ನಮ್ಮ ನೆತ್ತರಲ್ಲಿ ಕುದಿವ ಸಾವಿರ ಜ್ವಾಲಾಮುಗಳುಖಿ ಅಳುತಿವೆ
ಕಷ್ಟಗಳು ಕಣ್ಣೀರು ಮನುಷ್ಯನ ಅನಂತ ದುಃಖಿಗಳಿವೆ ನಮ್ಮ ಜತೆಗೆ

ಕರಗಿ ಹೋದೆಯ
ಉರಿ ನೋವಿನ ಸಮುದ್ರವೆ
ಸಾವು ನಗುತಿದೆ ಎಲ್ಲ ನಗುವನು ಹೀರಿ
ನಿನ್ನ ಸ್ನೇಹದ ನಗೆಯ ಕಿತ್ತು ನಗುತಿದೆ ಸಾವು
ಆದರೂ
ಕೊಲ್ಲಲಾರದು ಸಾವು
ಈ ಕತ್ತಲೆಯ ನಾಡಿನಲಿ
ನೀ ಬಿತ್ತಿ ಬೆಳೆದ ಮಾನವತೆಯನ್ನ

ಹಾಗಾಗಿ
ನಾವು ಗೆಲ್ಲುತ್ತೇವೆ
ಎಲ್ಲವನ್ನೂ ಕೊಲ್ಲುತ್ತೇವೆ ಜಗದೆಲ್ಲ ನೋವುಗಳನ್ನು
ಕೊನೆಗೊಂದು ದಿನ ಬರುತ್ತೇವೆ
ನಿನ್ನ ಜೊತೆ

—ಮುಳ್ಳೂರು ನಾಗರಾಜ

ನೊಂದವರ ಸಂಘಟನೆಗೆ ಬೆದರಿದ ಶಾಸಕ ಮತ್ತು ಅಧಿಕಾರಿಗಳು

ಸಾಗರೆ ಹೆಚ್. ಡಿ. ಕೋಟೆ ತಾ. ನ ಒಂದು ಗ್ರಾಮ. ಇಲ್ಲಿ ಎಲ್ಲಾ ಜಾತೀಯ ಬಡವರು ಕೆಲವೇ ಶ್ರೀಮಂತರು ನೆಲೆಸಿರುವರು. ಇಲ್ಲಿ ಹರಿಜನರು ಮತ್ತು ನಾಯಕರು ವಾಸಿಸಲು ಸರಿಯಾದ ಒಂದು ವ್ಯವಸ್ಥೆಯಿಲ್ಲ. ನಿವೇಶನಕ್ಕಾಗಿ ಎಷ್ಟೋ ಅರ್ಜಿಗಳನ್ನು ಸಲ್ಲಿಸಿದ ಇಲ್ಲಿನ ಬಡ ದಲಿತರು ಇಲ್ಲಿ ಸಾಹುಕಾರರ ಹಿಕಮತ್‌ನಿಂದಾಗಿ ಉತ್ತರವಿಲ್ಲದೆ ಹಂದಿ ನಾಯಿಗಳಂತೆ ಬದುಕುತ್ತಿದ್ದಾರೆ.

ಮತ್ತೆ ನಿವೇಶನಕ್ಕಾಗಿ ಬಾಯಿ ತೆರೆದ ಸಂಘಟಿತ ದಲಿತರು ಕಳೆದ ಮೇ 30ರಂದು ಸುಮಾರು 300 ಕುಟುಂಬಗಳು ಗುಡಿಸಲುಗಳನ್ನು ಹಾಕಿಕೊಳ್ಳುವುದರ ಮುಖಾಂತರ ಟಿಕಾಣಿ ಹೂಡಿದರು. ಗುಡಿಸಲುಗಳನ್ನು ಕಿತ್ತೆಸೆಯಲು ಬಂದ ಈ ನೊಂದವರ ಕಷ್ಟ ಅರಿಯದ ಅಧಿಕಾರಿ ವರ್ಗ ಮತ್ತು ದಲಿತರ ಹೆಸರಿನಲ್ಲಿ ಶಾಸಕ ಎನಿಸಿಕೊಂಡಿರುವ ಚಲುವಯ್ಯ ದಲಿತರ ಅಚಲನಿರ್ಧಾರದಿಂದ ಬಂದದಾರಿಗೆ ಸುಂಕವಿಲ್ಲದಂತೆ ಹಿಂದಿರುಗಿದ್ದು ದಲಿತಸಂಘಟನೆಯ ಪ್ರಬಲತೆಗೆ ಇಂಬುಕೊಟ್ಟಂತಾಗಿದೆ.

—ಕೊಡಗಿನ ಗಣೇಶ್

ಇನ್ನಿಲ್ಲದ ದೇವಯ್ಯ ಹರವೆ ಎಂಬ ಸ್ನೇಹ ತುಂಬಿದ ಒಡಲು

ದಿನಾಂಕ 19ರ 12ರ ವೇಳೆ. ಬೆಂಗಳೂರಿನ ನನ್ನ ಸೋದರ ಇಂಜಿನೀಯರ್ ಅಶ್ವತ್ಥ ನಾರಾಯಣನ ಮನೆ. ಊಟದ ವೇಳೆ. ಊಟದ ನಡುವೆ ನನ್ನ ತಮ್ಮ "ಅಣ್ಣ ನಿಮ್ಮ ಗಂಗೋತ್ರಿಯವರಂತೆ 32 ವರ್ಷದ ಉಪಾಧ್ಯಾಯ ತೀರಿಕೊಂಡ ಸುದ್ದಿ ಪ್ರಜಾವಾಣಿಯಲ್ಲಿ ಬಂದಿದೆ" ಎಂದ.

'ಅಷ್ಟು ಕಿರಿಯ ಯಾರು?' ಎಂಬ ಆತಂಕ ಆತುರ ನನಗಾಯಿತು. ತಮ್ಮನ ಪುತ್ರಿ ಲತಾ ಪ್ರಜಾವಾಣಿಯನ್ನು ತಂದುಕೊಟ್ಟಳು. ಅವಸರ ಗಾಬರಿಯಲ್ಲಿ ಆ ಸುದ್ದಿ ಹುಡುಕಾಡಿದೆ.

ಪ್ರತಿಭಾವಂತ ಲೇಖಕ

'ದೇವಯ್ಯ ಹರವೆ ನಿಧನ'ದ ಸುದ್ದಿ–ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೀಡರ್ ಆಗಿ ಕೆಲಸ ಮಾಡುತ್ತಿದ್ದ ತರುಣ ಲೇಖಕ. ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಸಂಚಾಲಕ ದೇವಯ್ಯ ಹರವೆ (32) ಅವರು ಇಂದು (ತಾ 18 6-83) ಇಲ್ಲಿ ಹೃದಯಾಘಾತದಿಂದ ನಿಧನರಾದರು' ಎಂದಿತ್ತು. ಓದಿ ನನಗೆ ಒಂದುರೀತಿ ವ್ಯಾಕುಲವಾಯಿತು. ನಂಬಲಾಗದ ಸುದ್ದಿ. ಇಷ್ಟು ಎಳೆಯ ವಯಸ್ಸಿನಲ್ಲಿ ಅದೆಂತಹ ಹೃದಯಾಘಾತ! ಆಶ್ಚರ್ಯ–ದುಃಖ ಹೇಳತೀರದಾಯಿತು. ಊಟ ಸೇರದಾಯಿತು. ಊಟದ ಶಾಸ್ತ್ರ ಮುಗಿಸಿದೆ. ಗೆಳೆಯ ಡಾ. ಜೀ. ಶಂ. ಪರಮಶಿವಯ್ಯ ಬೆಂಗಳೂರಿನಲ್ಲಿ ಇದ್ದರು. ಅಂದು ಅವರಿಗೆ ಫೋನ್ ಮೂಲಕ ಸುದ್ದಿ ಮುಟ್ಟಿಸಿದೆ. ಅವರೂ ಆಶ್ಚರ್ಯ ಪಟ್ಟರು ಅಲ್ಲದೆ–'ಎಂಥ ಪ್ರತಿಭಾವಂತ ಯುವ ಲೇಖಕನನ್ನು ಕಳೆದುಕೊಂಡೆವಲ್ಲಾ ?' ಎಂದು ಉದ್ಗಾರ ಎಳೆದರು. ಅವರ ಮಾತಿನಲ್ಲಿ ಸತ್ಯವಿತ್ತು-ಅನುಕಂಪವಿತ್ತು. ಅಂದೇ ನಾವಿಬ್ಬರೂ ಮೈಸೂರಿಗೆ ಬಂದೆವು. ಗಂಗೋತ್ರಿಯಲ್ಲಿನ ಅವರ ಮನೆಗೆ ಬಂದೆವು. ಅವರ ಮಕ್ಕಳು ಮಡದಿಯರನ್ನು ಸಂತೈಸಲು. ಆದರೆ ನಮಗೆ ನಿರಾಸೆ ಅಲ್ಲಿ ಕಾದಿತ್ತು. ಅವರ ಮನೆ ಬಾಗಿಲಿಗೆ ಬೀಗ ಹಾಕಿತ್ತು. ಇದು ನಿಜವಾದ ಅರ್ಥ ಇಲ್ಲೂ!

ಯವಿನಯಶಾಲಿ

ದೇವಯ್ಯ ಹರವೆ ನನಗೆ ಪರಿಚಿತವಾದದ್ದು ಯಾವಾಗ ಎಂದು ನನಗೆ ಸರಿಯಾಗಿ ತಿಳಿಯದು. ನಮ್ಮ ಗಂಗೋತ್ರಿಯ ಸಭಾಂಗಣದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ನಡೆಸಿದ ಕನ್ನಡ ಸಾಹಿತ್ಯ ಸಮ್ಮೇಳನ. ನಾಡಿನಾದ್ಯಂತ ಹಿರಿ ಕಿರಿಯ ಪ್ರತಿಭಾವಂತ ಸಾಹಿತಿಗಳು ಆಗಮಿಸಿದ್ದರು. ಮೂರು ದಿನಗಳ ಸಮಾರಂಭ. ಡಾ. ಹಾ. ಮಾ. ನಾಯಕ ಅವರ ನೇತೃತ್ವದಲ್ಲಿ ನನ್ನಂಥವರಿಗೂ ಸಾಕಷ್ಟು ಓಡಾಟ. ಕವಿಗೋಷ್ಠಿಯಲ್ಲಿ ಕೆಲವಾರು ಯುವಕರು ತಾವು ರಚಿಸಿದ ಕವನಗಳನ್ನು ಕೇಳುವ ಸದವಕಾಶ. ನಿಸಾರ್ ಅಹಮದ್, ಶಶಿಕಲಾವಸ್ತ್ರದ ಮಾಲತಿ ಪಟ್ಟಣಶೆಟ್ಟಿ–ಇವರ ಕವನಗಳು ನನಗೆ ಪ್ರಿಯವಾದಂತೆ ಓರ್ವ ಅಪರಿಚಿತ ಯುವಕನ ಕವನ ಮೆಚ್ಚಿಗೆಯಾಯಿತು.

ನಾನು ಕೇಳಿದೆ ಮಿತ್ರ ಕ್ಯಾತನಹಳ್ಳಿ ರಾಮಣ್ಣರನ್ನು : "ಈ ಹುಡುಗ ಯಾರೆಂದು."

"ದೇವಯ್ಯ ಹರವೆ... ಸಾರ್... ಈತ ಹರಿಜನ ....ಕನ್ನಡ ಎಂ.ಎ" ಎಂದು ಸೂಕ್ಷ್ಮ ಪರಿಚಯ ಮಾಡಿಕೊಟ್ಟರು ರಾಮಣ್ಣ.

ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ರೀಡರ್ ಹುದ್ದೆ ಖಾಲಿ ಇದ್ದಿತು. ಅನೇಕರು ಅರ್ಜಿ ಸಲ್ಲಿಸಿದ್ದರು. ಈ ಸ್ಥಾನಕ್ಕೆ ದೇವಯ್ಯನವರೇ ಲಾಯಕ್ಕು ಎಂದು ತೋರಿ ಡಾ. ಹಾ. ಮಾ. ನಾಯಕ ಇವರನ್ನೇ ಆಯ್ಕೆ ಮಾಡಿಕೊಂಡರು. ಕಾರಣ ಇಷ್ಟೆ. ದೇವಯ್ಯ ಹರವೆ ಅವರ ಗುಣ ಅವರಿಗೆ ಹಿಡಿಸಿತ್ತು.

ಪಿ. ಆರ್. ತಿಪ್ಪೆಸ್ವಾಮಿ

ಕೊಂಕು ಕುಹಕ ಅರಿಯದ ದೇವಯ್ಯ

ಒಮ್ಮೆ ನನ್ನ ಬಳಿ ಬಂದರು. 'ಸಾರ್....ನಿಮ್ಮ ....ಪರಿಚಯ ನನಗಿದೆ. ನಿಮ್ಮ ಚಿತ್ರಗಳು ಲೇಖನಗಳು ನನಗೆ ಮೆಚ್ಚಿಗೆಯಾಗಿವೆ....ಎಂದರು.' 'ಪಂಚಮ' ಪತ್ರಿಕೆಗೆ ಚಂದಾದಾರರಾಗಬೇಕು' ಎಂದರು. 'ಆಗಬಹುದು' ಎಂದೆ. ದೇವಯ್ಯನವರಲ್ಲಿ ಏನೋ ವಿಶೇಷ ಗುಣಗಳು ನನ್ನನ್ನು ಆಕರ್ಷಿಸಿದುವು. ನನ್ನ ಸೋದರನೆಂದೇ ನನ್ನ ಹೃದಯ ಒಪ್ಪಿಕೊಂಡಿತು. ಅಧ್ಯಯನ ಸಂಸ್ಥೆಯ ಆವರಣದಲ್ಲಿ ಎಲ್ಲಿ ಸಿಕ್ಕರೂ ಅಲ್ಲೆ ಕ್ಷಣವೇಳೆ ನಿಂತು ಮಂದಸ್ಮಿತ ನಗೆ ಬೀರುತ್ತಿದ್ದರು. ಕೊಂಕು ಕುಹಕ ಇಲ್ಲದ ದೇವಯ್ಯನವರ ಸಹಜ ನಡೆನುಡಿಗಳು ನನಗೆ ಖುಷಿ ತಂದವು.

ಸ್ನೇಹದ ಕೊಂಡಿ

ದೇವಯ್ಯ ಹರವೆ ಅವರ ಬರಹ ನಾನು ಹೆಚ್ಚು ಓದಿಲ್ಲ. ಆದರೆ ಅವರು ಹಿರಿಯ ಕವಿ 'ಪು.ತಿ.ನ.' ಬಗ್ಗೆ ಬರೆದ ವಿಮರ್ಶಾಲೇಖನ ಓದಿದ್ದೆ. 'ಪಂಚಮ'ದಲ್ಲಿ ಬಂದ ಒಂದೆರಡು ಲೇಖನಗಳನ್ನು ಗಮನಿಸಿದ್ದೆ. ಈ ಲೇಖನಗಳು ದೇವಯ್ಯನವರ ಸಾಹಿತ್ಯಾಧ್ಯಯನದ ಆಳ ಅಂತರಗಳನ್ನು ಮನವರಿಕೆ ಮಾಡಿಕೊಟ್ಟುವು. ಇವರು ದೀನದಲಿತರ ಕಾರ್ಯಕ್ರಮಗಳಲ್ಲಿ ಇಲ್ಲವೆ ಕನ್ನಡನಾಡ ನುಡಿ ಹೋರಾಟದಲ್ಲಿ ಯಾವಾಗಲೂ ತೊಡಗುತ್ತಿದ್ದರು. ದೇವಯ್ಯ ಅವರಿಗೆ ದೀನದಲಿತರ ಬಗ್ಗೆ ಎಷ್ಟು ಕಳಕಳಿ ಇದ್ದಿತೋ ಅಷ್ಟೇ ಮುಂದುವರಿದ ವರ್ಗದ ಬಗ್ಗೆಯೂ ಇದ್ದಿತು. ಇವರು ದೀನದಲಿತರಿಗೂ ಮುಂದುವರಿದವರಿಗೂ ಸ್ನೇಹದ ಕೊಂಡಿಯಂತಿದ್ದರು.

ಮೊನ್ನೆ (19–6–82) ಮಿತ್ರ ಪ. ವಿ. ಚಂದ್ರಶೇಖರ ಅವರು ದೇವಯ್ಯ ಹರವೆ ಬಗ್ಗೆ ಹೇಳಿದ ವಿಷಯ ಎಂಥವರೂ ಅವರ ಬಗ್ಗೆ ಹೆಮ್ಮೆ ಪಡುವಂತಿದೆ.

ಮೈಸೂರಿನ ಜಿಲ್ಲಾಧಿಕಾರಿಗಳಾಗಿದ್ದ ಸಾಹಿತ್ಯಾಭಿಮಾನಿ ಆರ್ಯ ಮಿತ್ರ ಅವರು ಒಮ್ಮೆ ಪ. ವಿ. ಚಂದ್ರಶೇಖರರೊಡನೆ ಸಮಾಲೋಚನೆ ನಡೆಸಿದರಂತೆ 'ನೋಡಿ ನಿಮ್ಮ (ಅಂಚೆ ತೆರಪಿನ ಶಿಕ್ಷಣ) ಇಲಾಖೆಯಲ್ಲಿ ನಮ್ಮವರೊಬ್ಬರು ಲೆಕ್ಚರರ್ ಇದ್ದಾರಂತೆ. ಚಾಮರಾಜನಗರದ ಕಡೆಯವರು, ದೇವಯ್ಯ ಎಂದೇನೋ ಹೆಸರು. ಅವರಿಗೆ ನನ್ನ ಮಗಳನ್ನು ಲಗ್ನ ಮಾಡಿಕೊಡಬೇಕೆಂದಿರುವೆ ದಯವಿಟ್ಟು ವಿಚಾರಿಸಿ ಎಂದಿದ್ದರಂತೆ ಆರ್ಯಾಮಿತ್ರರು.

ನಿಜವಾದ ದಲಿತ ಉದ್ಧಾರಕ

ಚಂದ್ರಶೇಖರರು ದೇವಯ್ಯನವರನ್ನು ವಿಚಾರಿಸಿದರು. ಅದಕ್ಕೆ ದೇವಯ್ಯನವರಿಂದ ಬಂದ ಉತ್ತರ "ನೋಡಿ........ ಸಾರ್....ನಮ್ಮ ತಂದೆತಾಯಿಗಳು ಚಿಂದಿ ಬಟ್ಟೆಯಲ್ಲಿರುತ್ತಾರೆ. ಅಂಥ ಶ್ರೀಮಂತ ಅಧಿಕಾರಿಗಳ ಮಗಳು ನಮ್ಮ ತಂದೆ ತಾಯಿಗಳಿಗೆ ಹೇಗೆ ಒಗ್ಗುತ್ತೆ ? ನೀವೇ ನೋಡಿ" ಎಂದು ಮರು ಪ್ರಶ್ನೆ ಹಾಕಿದರಂತೆ.

'ಅದಕ್ಕೇನು ನಿಮ್ಮ ತಂದೆತಾಯಿಗಳನು ಚೆನ್ನಾಗಿ ನೋಡಿಕೊಳ್ಳಬಹುದಲ್ಲ ಆ ಹುಡುಗಿ!'

'ಆ ಹುಡುಗಿ ಚೆನ್ನಾಗಿ ನೋಡಿಕೊಳ್ಳಬಹುದು ಆದರೆ ನಮ್ಮ ತಂದೆತಾಯಿಗಳು ನಾವು ಇರುವ ವಾತಾವರಣ ನೋಡಿ ನಮ್ಮನೆಗೇ ಬರದೇ ಹೋಗಬಹುದಲ್ಲಾ ?' ಇದು ದೇವಯ್ಯನವರು ತಳೆದ ನಿಲವು. ಇಷ್ಟು ಸಾಕು, ಎಂಥ ಹೃದಯ ದೇವಯ್ಯ ಹರವೆ ಅವರದು! ಶ್ರೀಮಂತಿಕೆ ಮನೆಬಾಗಿಲಿಗೆ ಬಂದರೂ 'ಬೇಡ....ದೇವರು ಕೊಟ್ಟಿದ್ದೇ ಸಾಕ' ಎನ್ನುವ ಶ್ರೀಮಂತಗುಣ!

ದೀನದಲಿತರ ಬಗ್ಗೆ ಅವರ ಒಡನಾಡಿಯಾಗಿ ದೇವಯ್ಯನವರು ಮಾಡಿದ ಕಾರ್ಯ ಅಪಾರ. ಬದುಕಿನ ನಾನಾ ಮುಖಗಳ ದುರಂತಗಳ ಆಳ ಪರಿಚಯವಿದ್ದ ದೇವಯ್ಯ ನಮ್ಮಿಂದ ಮರೆಯಾದುದು ಅತ್ಯಂತ ವಿಪರ್ಯಾಸ.

ಕುಶಲ ಕರ್ಮಿಗಳಿಗೆ ಸಹಾಯ ಸೌಲಭ್ಯಗಳು

ಅನುವಂಶಿಕವಾಗಿ ಬಂದಿರುವ ಕುಂಬಾರಿಕೆ, ನೇಕಾರಿಕೆ, ಬಡಿಗಿತನ, ಕಮ್ಮಾರಿಕೆ, ಚಾಪೆಹೆಣೆಯುವುದು, ಗೊಂಬೆ ತಯಾರಿಕೆ ಮೊದಲಾದ ಕಸುಬುಗಳನ್ನು ಅಭಿವೃದ್ಧಿಪಡಿಸಿಕೊಂಡು ಕುಶಲಕರ್ಮಿಗಳು ಆರ್ಥಿಕ ಪ್ರಗತಿ ಹೊಂದಲು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಅನೇಕ ಸಹಾಯ-ಸೌಲಭ್ಯಗಳನ್ನು ನೀಡುತ್ತಿದೆ.

ರಾಜ್ಯದ ಜಿಲ್ಲೆ, ತಾಲ್ಲೂಕು ಕೇಂದ್ರಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಒಟ್ಟು ೩೧ ಕುಶಲಕರ್ಮಿ ತರಬೇತಿ ಕೇಂದ್ರಗಳಲ್ಲಿ ವಿದ್ಯಾವಂತ ಹಾಗೂ ಕನಿಷ್ಟ ಅಕ್ಷರಜ್ಞಾನ ಇರುವ ಕುಶಲ ಕರ್ಮಿಗಳಿಗೆ ೬ ರಿಂದ ೮ ತಿಂಗಳ ತರಬೇತಿ ನೀಡಿ, ತರಬೇತಿ ಅವಧಿಯಲ್ಲಿ ೧೦೦ ರಿಂದ ೧೫೦ರೂ ಮಾಸಿಕ ಶಿಷ್ಯವೇತನ ಕೊಡಲಾಗುತ್ತಿದೆ.

ಕುಶಲ ಕೈಗಾರಿಕೆಗಳನ್ನು ಕೈಗೊಳ್ಳಲು ಮತ್ತು ಅವುಗಳನ್ನು ಉತ್ತಮಪಡಿಸಿಕೊಳ್ಳಲು ಅವಶ್ಯಕ ಉಪಕರಣಗಳು ಮತ್ತು ಆರ್ಥಿಕ ನೆರವನ್ನು ಒದಗಿಸಲಾಗುತ್ತಿದೆ.

ವಿಶೇಷ ಘಟಕ ಯೋಜನೆಯನ್ವಯ ಹರಿಜನ ಕುಶಲಕರ್ಮಿಗಳು ತಾವು ವಾಸಿಸುವ ಸ್ಥಳದಲ್ಲೇ ತಮ್ಮ ಉದ್ಯೋಗಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ವಾಸಕ್ಕೆ ಮತ್ತು ಉದ್ಯೋಗಗಳಿಗೆ ಅನುಕೂಲವಾಗುವಂತಹ ಶೆಡ್ಡುಗಳನ್ನು ಕಟ್ಟಿಸಿ ಕೊಡಲಾಗುತ್ತಿದೆ.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ್, ಉಪವಿಭಾಗಗಳಲ್ಲಿರುವ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕರು ಮತ್ತು ತಾಲ್ಲೂಕು ಕೇಂದ್ರಗಳಲ್ಲಿರುವ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬೇಕು.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ,

ಕರ್ನಾಟಕ ಸರ್ಕಾರ,
ಬೆಂಗಳೂರು.

'...ಅವರು ರಸ್ತೆಯಲ್ಲಿ ಕೇಳಿದರು : 'ನೀವೂ ರಜಪೂತರೇನು?' ಆ ಕ್ಷಣ ನನಗೆ ಏನೊಂದೂ ಹೊಳೆಯಲಿಲ್ಲ. ಸರಿ, ನನ್ನ ಗಂಟಲಿನಿಂದ ಯಾವುದೊ ಅಮಾಯಕ ರೀತಿಯಲ್ಲಿ 'ಹೌದು, ನಾನು ರಜಪೂತ' ಎಂಬ ಮಾತುಗಳು ಹೊರ ಬಂದವು. ನಾನು ಸುಳ್ಳು ಹೇಳಿದ್ದು ಸರಿಹೋಯಿತೇನೋ. ಏಕೆಂದರೆ ನನ್ನ ಜಾತಿಯ ಯಾವೊಬ್ಬ ಲೇಖಕನಾಗಲಿ, ಪತ್ರಕರ್ತನಾಗಲಿ ನನಗೆ ತಿಳಿದ ಮಟ್ಟಿಗೆ ಪಟನಾದಲ್ಲಿರಲಿಲ್ಲ. ಆಗ ಅವರು ಮುಗುಳುನಗುತ್ತಾ ನನ್ನೊಂದಿಗೆ ಹೇಳಿದರು: 'ಉಪ್ಪಾಲ್‌ರಿಗೆ ಹೇಳಿ ನಿಮ್ಮ ಸಂಬಳ ಹೆಚ್ಚಿಸುತ್ತೇನೆ. ನೀವು ನಮ್ಮವರು ಅಲ್ಲವೇ, ಅದಕ್ಕೇ'.

ನನ್ನ ನೋವಿನ ಸಂಪುಟದಿಂದ — ೨



ಮಧುಕರ ಸಿಂಹ

[...]ದ ಸಂಚಿಕೆಯಿಂದ)

ಇದೇ ಬಗೆಯ ಮತ್ತೊಂದು ಉದಾಹರಣೆ ಕೊಡುವೆ. ಈ ಊರಿನಲ್ಲಿ ಮತ್ತೊಂದು ಸ್ಕೂಲಿದೆ. ಅಲ್ಲಿನ ಒಬ್ಬ ಶಿಕ್ಷಕರು ರಜೆಯ ಮೇಲಿದ್ದದ್ದರಿಂದ ಒಂದು ತಿಂಗಳ ಮಟ್ಟಿಗೆ ಅಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಆ ಶಾಲೆಯಲ್ಲಿ ಖಾಯಂ ನೌಕರಿ ಇದ್ದರೂ ಆ ಸ್ಕೂಲಿನ ಸೆಕ್ರೆಟರಿ ನಾನು ಅವರ ಜಾತಿಯವನಲ್ಲನೆಂಬ ಕಾರಣಕ್ಕಾಗಿ ನನಗೆ ಖಾಯಂ ನೌಕರಿ ಕೊಡಲಿಲ್ಲ. ಅವರ ಪ್ರಕಾರ ನನ್ನ ನೇಮಕ ಖಾಯಂ ಆಗಿ ಮಾಡಿದ್ದಾದರೆ ಅವರ ಜಾತಿಯವರು ಅವರಿಗೆ ಬೈಯುತ್ತಾರಂತೆ (ಆಕಸ್ಮಿಕವಾದ ಸಂಯೋಗದ ಮಾತೆಂದರೆ, ಈ ಸೆಕ್ರೆಟರಿ ಬಿಹಾರ್ ಸರ್ಕಾರದ ಹಿಂದಿನ ಮಂತ್ರಿ ಮಂಡಲದಲ್ಲಿ ರಾಜ್ಯ ಮಂತ್ರಿಗಳಾದರು) ಇವರು ಮಂತ್ರಿಯಾದ ಮೇಲೆ ಇವರ ಚೇಲಾಗಳು ಇವರನ್ನು ತೆರೆದ ಜೀಪಿನಲ್ಲಿ ಕೂರಿಸಿಕೊಂಡು ನಗರದಲ್ಲಿ ವೈಭವದಿಂದ ಅಭಿನಂದಿಸಿದರು. ನಾಗರೀಕ ಅಭಿನಂದನೆಗೆ ಉತ್ತರ ಕೊಡುತ್ತ ಅವರು ಕೈಮುಗಿದು ಜನಗಳಲ್ಲಿ ಹೀಗೆ ಪ್ರಾರ್ಥಿಸಿಕೊಂಡರು : 'ಬೇಕ್ಕಾದ್ದು ಮಾಡಿ, ಆದರೆ ಜಾತಿ-ಪಾತಿ ಮಾಡಬೇಡಿ' ಈ ಜಾತಿ ಪಂಗಡಗಳು ಎಂಥವೆಂದರೆ ಇವು ನಮ್ಮ ದೇಶವನ್ನು ತಿನ್ನುತ್ತಿರುವ ವಿಷಗಳು. ನಾನು ಈ ಜಾತಿ ಪಂಗಡಗಳನ್ನು ತುಚ್ಛವೆಂದು ಪರಿಗಣಿಸಿರುವುದರಿಂದಲೇ ತಮ್ಮ ಪ್ರತಿನಿಧಿಯಾಗಿದ್ದೇನೆ. ತಾವು ಕೂಡ ಈ ಜಾತಿ ಪಂಗಡಗಳಿಂದ ಮೇಲೇಳಿ' ಜನತೆ ಮೊಟ್ಟಮೊದಲ ಸಾರಿ ಅವರ ಭಾಷಣ ಕೇಳಿಸಿಕೊಳ್ಳುತ್ತಿತ್ತು. ಎಲೆ-ಅಡಿಕೆಯ ರಸದಲ್ಲಿ [...]ಯಿದ್ದ ಆತನ ಹಲ್ಲುಗಳು ಮೊಟ್ಟಮೊದಲ ಬಾರಿಗೆ ಜನತೆಯ ಮುಂದೆ ತೆರೆದುಕೊಂಡಿದ್ದವು. ನಾನು ನೌಕರಿಯನ್ನು ಹುಡುಕುತ್ತ ಪಟನಾದ ಒಂದು ದೈನಿಕ ಪತ್ರಿಕೆಯ ಕಛೇರಿಗೆ ಹೋಗುತ್ತಿದ್ದ ಆ ದಿನಗಳು ಇಂದಿಗೂ ನನ್ನ ಕಣ್[...] ಇವೆ.

ದೈನಿಕ ಪತ್ರಿಕೆಯ ಸಂಪಾದಕ [...]ಪ್ಪ [...] ಲೇಖಕರಾದ ಗುರುಪ್ರಸಾದ್ ಉಪ್ಪಲ್ ಅವರ 'ಕಹಾನಿಯಾಂ' ಎಂಬ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ಈ ಮಾಸ ಪತ್ರಿಕೆಯಲ್ಲಿ ನನ್ನ ಅನೇಕ ಕತೆಗಳನ್ನು ಪ್ರಕಟಿಸಿದ್ದರು. ಹೀಗಾಗಿ ನನ್ನ ಹೆಸರು ಅವರಿಗೆ ನೆನಪಿತ್ತಾದ್ದರಿಂದ ೭೫ರೂ.ಗಳ ಮಾಸಿಕ ವೇತನದ ಮೇಲೆ ನನ್ನನ್ನು ನೇಮಕ ಮಾಡಿಕೊಂಡರು. ಸಿಟಿ ರಿಪೋರ್ಟರ್ ಆಗಿ ಪಟನಾ ಬೀದಿಗಳಲ್ಲಿ ಗಲ್ಲಿಗಳಲ್ಲಿ ಸುತ್ತುವುದು, ಸಾರ್ವಜನಿಕ ಹಾಗೂ ರಾಜಕೀಯ ವ್ಯಕ್ತಿಗಳನ್ನು ಭೇಟಿ ಮಾಡುವುದು, ಆಸ್ಪತ್ರೆ ಹಾಗೂ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿ ಅಲ್ಲಿನ ಸುದ್ದಿ ಸಂಗ್ರಹ ಮಾಡಿ ವರದಿ ಮಾಡುವುದು ನನ್ನ ಕೆಲಸವಾಗಿತ್ತು. ಒಂದು ದಿನ ಪತ್ರಿಕೆಯ ಸಂಪಾದಕರು ಹಾಗೂ ಉಪ್ಪಲ್‌ರ ಮಿತ್ರರೊಬ್ಬರು ನನ್ನನ್ನು ವಿಧಾನ ಸಭೆಗೆ ಸಮಾಚಾರ ಸಂಕಲನದಲ್ಲಿ ಟ್ರೈನಿಂಗ್ ನೀಡಲು ತಮ್ಮ ಜೊತೆ ಕರೆದುಕೊಂಡುಹೋದರು, ಅಲ್ಲಿಂದ ಹಿಂತಿರುಗುವಾಗ ಅವರು ರಸ್ತೆಯಲ್ಲಿ ಕೇ[...] 'ನೀವೂ ರಜಪೂತರೇನು?' ಆ ಕ್ಷಣ ನನಗೆ ಏನೊಂದೂ ಹೊಳೆಯಲಿಲ್ಲ. ಸರಿ, ನನ್ನ ಗಂಟಲಿನಿಂದ ಯಾವುದೋ ಅಮಾಯಕ ರೀತಿಯಲ್ಲಿ 'ಹೌದು, ನಾನು ರಜಪೂತ' ಎಂಬ ಮಾತುಗಳು ಹೊರಬಂದುವು. ನಾನು ಸುಳ್ಳುಹೇಳಿದ್ದು ಸರಿಹೋಯಿತೇನೋ. ಏಕೆಂದರೆ ನನ್ನ ಜಾತಿಯ ಯಾವೊಬ್ಬ ಲೇಖಕನಾಗಲಿ, ಪತ್ರಕರ್ತನಾಗಲಿ ನನಗೆ ತಿಳಿದಮಟ್ಟಿಗೆ ಪಟನಾದಲ್ಲಿರಲಿಲ್ಲ. ಆಗ ಅವರು ಮುಗುಳ್ನಗುತ್ತ ನನ್ನೊಂದಿಗೆ ಹೇಳಿದರು. 'ಉಪ್ಪಲ್‌ರಿಗೆ ಹೇಳಿ ನಿಮ್ಮ ಸಂಬಳ ಹೆಚ್ಚಿಸುತ್ತೇನೆ. ನೀವು ನಮ್ಮವರು ಅಲ್ಲವೇ, ಅದಕ್ಕೆ. ಈ ಹೊತ್ತು ನೋಡ್ತಿರಿ, ನಿಮ್ಮನ್ನು ತುಂಬಾ ಹೊಗಳ್ತೀನೆ' ಸಾಹಿತ್ಯ ಜಗತ್ತಿನ ಎರಡು ಘಟನೆಗಳು ಈಗಲೂ ನನ್ನ ಮನಸ್ಸಿನಲ್ಲಿ ಗಾಯಗಳಂತೆ ಹಸಿರಾಗಿವೆ. ವಾರಣಾಸಿಯಲ್ಲಿ ಹಿರಿಯ ಸಾಹಿತಿಯೊಬ್ಬರ ಮನೆಯಲ್ಲಿ ಸಾಮಾನ್ಯವಾಗಿ ನಾನು ತಂಗುತ್ತಿದ್ದೆ. ಒಮ್ಮೊಮ್ಮೆ ಒಂದು ವಾರದವರೆಗೂ ಅವರ ಮನೆಯಲ್ಲಿ ಉಳಿದುಬಿಡುತ್ತಿದ್ದೆ. ಅವರ ಸೋದರ ನನ್ನ ಸಹಪಾಠಿಯಾದುದರಿಂದ ನನಗೂ ಕಸಿವಿಸಿಯೆನಿಸುತ್ತಿರಲಿಲ್ಲ. ಒಂದು ದಿನ ನನ್ನ ಸ್ನೇಹಿತನ ತಾಯಿ ನನ್ನನ್ನು ಕುರಿತು 'ನೀನೂ ಕಮ್ಯೂನಿಸ್ಟ್ ಮಗನೆ?' ಎಂದು ಕೇಳಿದಾಗ— 'ಹೌದು ತಾಯಿ' ಅಂದೆ. ಆಗ ನನ್ನ ಮಾತನು ಕೇಳಿ ನನ್ನ ಸ್ವಂತ ತಾಯಿಯಂತೆ ಆಕೆ ಸಂತೋಷಪಟ್ಟಿದ್ದಳು. ಆದರೆ ಕೆಲವು ದಿನಗಳ ನಂತರ ನನ್ನ ಸ್ನೇಹಿತರು ಹೇಳಿದರು—'ವಾರಣಾಸಿಯ ಸ್ನೇಹಿತ ಅವರಿಗೆ ಹೇಳಿದನಂತೆ, ಆ ನನ್ಮಗ ಮಧುಕರ ಠಾಕೂರನಲ್ಲ [...]ಮ್ಮ ಅಮ್ಮನಿಂದ ತನ್ನ ಎಂಜಲನ್ನು [...]ದ್ದಾನೆ. ಅಷ್ಟೆ ಸಾಲದೂ ಅಂತ ನನ್ನ [...]ತೆ ಒಂದೇ ತಟ್ಟೆಯಲ್ಲಿ ಊಟಮಾಡಿದ್ದಾ[...] ಅಂತ. ಆತನ ಒಂದೆರಡು ಕತೆಗಳು ಇದೇ ಸಾಮಂತಿ ಸಂಸ್ಕೃತಿಯ ಹಿನ್ನಲೆಯಲ್ಲಿ ಪ್ರಕಟವಾಗಿರುವುದನ್ನು ನೋಡಿದರೆ, ಈಗ ಯೋಚಿಸಿದರೆ, ಆ ಸ್ನೇಹಿತನ ಮಾತುಗಳು ನಿಜ ಅನ್ನಿಸುತ್ತಿವೆ.

ಅನುವಾದ : ತಿಪ್ಪೇಸ್ವಾಮಿ

ಇದೇ ರೀತಿಯ ಇನ್ನೊಂದು ಘಟನೆ ಅಲಹಾಬಾದ್‌ನಲ್ಲೂ ನಡೆಯಿತು. ಒಂದು ಕಾಲದಲ್ಲಿ ತುಂಬಾ ಚರ್ಚಿತನಾಗಿದ್ದ ಲೇಖಕನೊಬ್ಬ ಒಂದು ಪತ್ರಿಕೆಯ ವಿಶೇಷಾಂಕವನ್ನು ಸಂಪಾದಿಸುತ್ತಿದ್ದರು. ಆ ವಿಶೇಷಾಂಕಕ್ಕಾಗಿ ನನ್ನಿಂದಲೂ ಒಂದು ಕತೆಯನ್ನು ಆಹ್ವಾನಿಸಿದ್ದರು. ಒಂದು ನಿಶ್ಚಿತ ಗುಂಪಿನ ಜನ ಆತನನ್ನು ತಮ್ಮ ಮಧ್ಯೆ ಇರುವ ಮಹತ್ವಪೂರ್ಣ ಲೇಖಕನೆಂದಷ್ಟೇ ಅಲ್ಲ 'ಸ್ವಾತಂತ್ರ್ಯ ನಂತರ ಪ್ರಮುಖ ಚೇತನ' ಎಂದೇ ವರ್ಣಿಸುತ್ತಿದ್ದರು. ಕೆಲದಿನಗಳ ನಂತರ ಪಟನಾದ ಒಬ್ಬ ಪ್ರಕಾಶಕನಿಂದ-ಈಗ ಇವರು ಲೋಕಸಭೆಯ ಸದಸ್ಯರು ಹಾಗೂ ತಮ್ಮ ಪಾರ್ಟಿಯ ಕೇಂದ್ರ ಮಟ್ಟದ ಯುವ ನಾಯಕರೂ ಕೂಡ—ನಾನು ಆ ಲೇಖಕ ಮಹಾಶಯನ ಜಾತಿ-ಪಂಗಡಕ್ಕೆ ಸೇರಿದವನಲ್ಲ ಎಂಬ ಸಂಗತಿ ಆತನಿಗೆ ತಿಳಿಯಿತು. ಈ ಸಂಗತಿಯಿಂದ ಗಾಬರಿಗೊಂಡ ಅವರು ತಮಗೆ ಬಂದ ಸುದ್ದಿಯನ್ನು ಕನ್‌ಫರ್ಮ್ ಮಾಡಿಕೊಳ್ಳಲು ಅಲಹಾಬಾದ್‌ನಲ್ಲೇ ಇರುವ ನನ್ನ ಆತ್ಮೀಯ ಮಿತ್ರರಲ್ಲಿ ಹೋಗಿ 'ಏನ್ ಸ್ವಾಮಿ, ಆ ಮಧುಕರ್ ಸಿಂಹ ಯಾವ ಜಾತಿಯವನು?' ಎಂದು ಪ್ರಶ್ನಿಸಿದರು.

ನನ್ನ ಆ ಮಿತ್ರರಿಗೆ ನನ್ನ ಈ ಸಂಗತಿಗಳೆಲ್ಲ ತಿಳಿದಿರಲಿಲ್ಲ. ನನಗೆ ಬಂದ ಸುದ್ದಿಯಂತೆ ನನ್ನಕತೆ ಅಚ್ಚಾಗಿತ್ತಂತೆ, ಅದನ್ನು ಪತ್ರಿಕೆಯ ಪ್ರತಿಗಳಿಂದ ಹರಿದು ಹಾಕಲಾಯಿತಂತೆ. ನನ್ನ 'ವಾಸ್ತವಿಕತೆ'ಯ ಪರಿಚಯವಾಗುತ್ತಿದ್ದಂತೆಯೇ ಆತನ ಹೃದಯದ ಮೇಲೆ ಎಂಥ ಆಘಾತವಾಯಿತೆಂದರೆ ನನ್ನ ಅಚ್ಚಾದ ಕತೆಯನ್ನು ಆತನಿಂದ ನೋಡಲಾಗಲಿಲ್ಲ ಅಂತ ಕಾಣಿಸುತ್ತದೆ. ನಿಜ ಹೇಳಬೇಕೆಂದರೆ, ನನ್ನ ಹೆಸರಿನ ಜೊತೆಯಲ್ಲಿರುವ 'ಸಿಂಹ' ಶಬ್ದ ಸಾಮಂತಿ ಸಂಸ್ಕಾರಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಮತ್ತು ಜನಗಳಲ್ಲಿ ತಪ್ಪು ಕಲ್ಪನೆಯನ್ನು ಮೂಡಿಸಿದೆ. ಈ ತಪ್ಪುಕಲ್ಪನೆಯ ಗ್ರಹಿಕೆಯನ್ನು ನೆನೆಸಿಕೊಂಡರೆ ಖುಷಿ ಎನ್ನಿಸುತ್ತದೆ. ಏಕೆಂದರೆ ಮುಖವಾಡಗಳನ್ನು ತೊಟ್ಟಿರುವ ಲೇಖಕರ, ರಾಜಕೀಯ ಪುಡಾರಿಗಳ ಮುಖಗಳು ತಮ್ಮ ನಗ್ನ ರೂಪದೊಂದಿಗೆ ನಗ್ನಗೊಳ್ಳುತ್ತವೆ. ಹೀಗಾಗಿ ನಮ್ಮ ದೇಶದಲ್ಲೂ ಕೂಡ ಸಾಂಸ್ಕೃತಿಕ ಕ್ರಾಂತಿ, ಸಂಪೂರ್ಣ ಬದಲಾವಣೆ ನಿಜಕ್ಕೂ ಆಗಬೇಕು ಎಂದು ನನಗೂ ಅನ್ನಿಸುತ್ತಿದೆ. ಸಮಾಜವಾದ ಬರುವುದನ್ನು ತಡೆಯುವ ಸಾವಿರಾರು ಸಾಂಸ್ಕೃತಿಕ ಶಕ್ತಿಗಳು ನಮ್ಮ ಸುತ್ತಮುತ್ತ ತಲೆ ಎತ್ತಿ ನಿಂತಿವೆ. ರಾಜಕೀಯ ಕ್ಷೇತ್ರದಲ್ಲಿಂತೋ ಅಂತೆಯೇ ಸಾಂಸ್ಕೃತಿಕ ಕ್ಷೇತ್ರದಲ್ಲೂ ಸಂಪೂರ್ಣ ನಾಯಕತ್ವ ಇಂದೂ ಕೂಡ ಕ್ರಿಯಾಹೀನರಾದ ಸಾಮಂತವಾದಿಗಳ ಕೈಲಿದೆ. ಇವರಿಗೆ ಸರ್ಕಾರಿ ವ್ಯವಸ್ಥೆಯ ಸಂಪೂರ್ಣ ರಕ್ಷೆ ಹಾಗೂ ಅಭಯ ಹಸ್ತ ಲಭ್ಯವಿದೆ. ಇವರು ವ್ಯವಸ್ಥೆಯ ವಿರುದ್ಧ ಉಸಿರೆತ್ತುವ ಲೇಖಕರನ್ನು ರಾಜಕೀಯ ನಾಯಕರನ್ನು ತುಳಿದುಬಿಡುತ್ತಾರೆ. ಸರ್ಕಾರ ಹಾಗೂ ಸರ್ಕಾರೇತರ, ವ್ಯವಸ್ಥೆ ಹೆಚ್ಚು ಕಡಿಮೆ ಒಂದೇ ಬಗೆಯದೇ. 'ತುಳಿಯುವ' ಪ್ರಸ್ತಾಪ ಬಂದಾಗ ಈ 'ಎರಡೂ' ಬಣಗಳ ಪ್ರಯತ್ನಗಳು ಮತ್ತು ಕ್ರಿಯೆಗಳು ಒಟ್ಟಾಗಿ ಒಂದಾಗಿಬಿಡುತ್ತವೆ. ಸಾಂಸ್ಕೃತಿಕ ಅನುಕೂಲಗಳನ್ನು ತಮ್ಮ ನೀಳ ಕೈಗಳಿಂದ ಬಾಚಿಕೊಳ್ಳುವ ಈ ಸಾಮಂತರಿಗೆ ಎಚ್ಚೆತ್ತ ಲೇಖಕರಿಂದ ಹಾಗೂ ರಾಜಕೀಯ ನಾಯಕರಿಂದ ಆಕ್ರಮಿತಗೊಂಡೇವೆಂಬ ಆತಂಕ, ಭಯ ಸದಾ ಇದ್ದದ್ದೇ. ಹೀಗಾಗಿ ಸಂಸ್ಕೃತಿಯನ್ನು ಪ್ರತಿಗಾಮಿಯನ್ನಾಗಿ ಮಾಡಿ ವಾಸ್ತವಿಕತೆಯನ್ನು ಯಾವ ಕಾಲಕ್ಕೂ 'ಜೈಲಿ'ನ ಒಳಗಡೆ ಹಾಕುವಲ್ಲಿ ನೆರವು ನೀಡುತ್ತಾರೆ. ಈ ಸ್ವಭಾವದ ಒಂದಷ್ಟು ಮಂದಿ ಶಾಶ್ವತವಾಗಿ ಬಹುಶಃ ಪ್ರತಿ ಊರಿನಲ್ಲಿದ್ದು, ಪ್ರತಿ 'ಹೊಸತ'ನ್ನು ಮುಂದೆ ಮುಂದೆ ಓಡಿ ತಬ್ಬಿ ಹಿಡಿದುಕೊಳ್ಳುತ್ತಾರೆ. ನಂತರ ಈ 'ಹೊಸತ'ರಿಂದ ತಮ್ಮ ವ್ಯಕ್ತಿತ್ವವನ್ನು ವೃಥ ವಿಕರಿಸಿಕೊಳ್ಳಲು ಉಪಯೋಗಿಸಿಕೊಳ್ಳುವುದಷ್ಟೇ ಅಲ್ಲ, ಅದನ್ನು ಆಂದೋಲನ ಹಾಗೂ ಘೋಷಣೆಯನ್ನಾಗಿ ಪರಿವರ್ತಿಸಿ ಅದರ ನಿಜ ಸ್ವರೂಪವನ್ನು ಧ್ವಂಸಗೊಳಿಸಿಬಿಡುತ್ತಾರೆ. ಹೀಗೆ ಮಾಡಿದ್ದರ ಪರಿಣಾಮವನ್ನು ಉಣ್ಣುವವರು ಎಚ್ಚೆತ್ತ ಲೇಖಕರು ಹಾಗೂ ಸಕ್ರಿಯ ರಾಜಕೀಯ ನಾಯಕರು. ಅಲ್ಲದೆ ಭಯವೆಂಬ ಬಿಸಿಯ ಕಾವಿಗೆ ಇವರೆಲ್ಲ ಕರುಕಾಗಿಬಿಡುತ್ತಾರೆ.

ನನ್ನ ಬಹಳಷ್ಟು ಜನ ಲೇಖಕ ಮಿತ್ರರು 'ನನ್ನ ಬರವಣಿಗೆಯಲ್ಲಿ 'ಪುನರಾವೃತ್ತಿ' ಇದೆ ಎಂದು ಆಕ್ಷೇಪಿಸುತ್ತಾರೆ. ಇದಕ್ಕೆ ನಾನೇನು ಮಾಡಲಿ! ನಾನು ಎಂಥ ಪರಿಸ್ಥಿತಿಗಳಿಂದ, ಸಂಘರ್ಷಗಳಿಂದ ಆವೃತ್ತನಾಗಿದ್ದೇನೆಂದರೆ ಅವುಗಳಿಂದ ಬಿಡಿಸಿಕೊಳ್ಳುವುದು ನನ್ನಿಂದ ಸಾಧ್ಯವಾಗುತ್ತಿಲ್ಲ. ಕೆಲವು ದಿನಗಳ ಹಿಂದೆ ಡಾ. ರಮೇಶ್ ಕುಂತಲ್ ಮೇಘ್ ಅವರು ಇದನ್ನೇ ಬರೆದಿದ್ದರು—ನಿಮ್ಮ ಪ್ರತಿಬದ್ಧತೆಯ ಕತೆಗಳು ಯಾವೊಂದು ಆಧಾರಭೂತ ವರ್ಗದಲ್ಲಿ ಬೇರುಬಿಟ್ಟಿವೆಯೋ ಅಲ್ಲಿ ಅವು ನಾಳೆಗೆ ದಿಕ್ಕು ತೋರಬಲ್ಲುವು. ಈ ಮಾತುಗಳನ್ನು ನೀವು ಅತಿಶಯೋಕ್ತಿ ಎಂದು ಭಾವಿಸಬಾರದು. ಆದರೆ ನೀವು ರಿಪೀಟ್ ಮಾಡಬೇಡಿ. ಥೀಮ್‌ನಲ್ಲಿ ವೈವಿಧ್ಯತೆ ಇರಲಿ. ಈ ಮಾತುಗಳನ್ನೆಲ್ಲ ಒಪ್ಪಿಕೊಂಡರೂ ಸಹ ಇದು ನನ್ನ ಅಸಹಾಯಕತೆ, ವಿವಶತೆ, ಗುಲಾಬಿಗಾಗಿ ಹಂಬಲಿಸುವುದನ್ನೂ ನಾನು ಬಿಟ್ಟಿದ್ದೇನೆ.

ಆ ದಿನಗಳಲ್ಲಿ ನಾನು ವಾರ ಪತ್ರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ ನೂರು ರೂಪಾಯಿ ಸಂಬಳ ಬರುತ್ತಿತ್ತು. ಕೊಂಚ ಅನುವಾದದ ಕೆಲಸ ಮಾಡಿದರೆ ಮೂವತ್ತು-ನಲವತ್ತು ರೂ. ಗಳು ಹೆಚ್ಚುವರಿಯಾಗಿ ದೊರೆಯುತ್ತಿದ್ದವು. ಕೆಲವು ದಿನಗಳ ನಂತರ ಸಂಬಳ ಬರುವುದೂ ನಿಂತು ಹೋಯಿತು. ಆದರೂ ನಾವೆಲ್ಲ ನೌಕರರು ಮೂರು ತಿಂಗಳ ಕಾಲ ಸಂಬಳವಿಲ್ಲದೆಯೇ ಕೆಲಸ ಮಾಡಿದೆವು. ರಾಜಾಬಹದ್ದೂರ್ ಪಟನಾದಿಂದ ಹೊರಗೆಹೋಗಿರುವುದರಿಂದ ಅವರು ಬರುವವರೆಗೆ ಸಂಬಳವಾಗುವುದಿಲ್ಲ ಎಂದು ಮೇನೆಜರ್ ಹೇಳಿದರು. ಕೊನೆಗೆ ಬೇರೆ ಮಾರ್ಗವಿಲ್ಲದೆ ನಾವು ಹರತಾಳ ಮತ್ತು ಉಪವಾಸ ಸತ್ಯಾಗ್ರಹದ ಬೆದರಿಕೆಯನ್ನು ಹಾಕಿದೆವು. ಈ ಮಧ್ಯೆ ಒಂದಕ್ಕಿಂತ ಒಂದು ಕಷ್ಟವನ್ನು ಅನುಭವಿಸಬೇಕಾಗಿ ಬಂತು. ನಾನು ವಾಸವಾಗಿದ್ದ ಮನೆ ಮಾಲೀಕ ನನ್ನ ಗೈರುಹಾಜರಿಯಲ್ಲಿ ನನ್ನ ಹೆಂಡತಿ ಮಕ್ಕಳನ್ನು, ಹೊರಕ್ಕೆ ಹಾಕಿ ಮನೆಗೆ ಬೀಗ ಹಾಕಿದ. ಚಳಿಗಾಲದ ದಿನಗಳು. ಪಟನಾ ಹಾಗೂ ಬಿಹಾರದ ಅನೇಕ ಕಡೆಗಳಲ್ಲಿ ಶೀತಮಾರುತದ ಭಯಂಕರ ಪ್ರಕೋಪವಿತ್ತು. ನನ್ನೆಲ್ಲ ಸಾಮಾನುಗಳನ್ನು ನನ್ನ ಮನೆಯ ಮಾಲೀಕ ನಾನು ಕೊಡಬೇಕಾಗಿದ್ದ ಬಾಡಿಗೆಗೆ ಉತ್ತರ ಹಾಕಿ ಮುಟ್ಟುಗೋಲು ಹಾಕಿಕೊಂಡಿದ್ದ. ಕಡ್ಲೆಕಾಯಿ ಕೊಂಡು ತಿನ್ನಲು ಸಹ ಜೇಬಿನಲ್ಲಿ

ರಾಜಕೀಯ ಕ್ಷೇತ್ರದಲ್ಲಿಂತೋ ಅಂತೆಯೇ ಸಾಂಸ್ಕೃತಿಕ ಕ್ಷೇತ್ರದಲ್ಲೂ ಸಂಪೂರ್ಣ ನಾಯಕತ್ವ ಇಂದೂ ಕೂಡ ಕ್ರಿಯಾಹೀನರಾದ ಸಮತಾವಾದಿಗಳ ಕೈಲಿದೆ. ಇವರಿಗೆ ಸರ್ಕಾರಿ ವ್ಯವಸ್ಥೆಯ ಸಂಪೂರ್ಣ ರಕ್ಷೆ ಹಾಗೂ ಅಭಯ ಹಸ್ತ ಲಭ್ಯವಿದೆ. ಇವರು ವ್ಯವಸ್ಥೆಯ ವಿರುದ್ಧ ಉಸಿರೆತ್ತುವ ಲೇಖಕರನ್ನು, ರಾಜಕೀಯ ನಾಯಕರನ್ನು ತುಳಿದು ಬಿಡುತ್ತಾರೆ. ಸರ್ಕಾರ ಹಾಗೂ ಸರ್ಕಾರೇತರ ವ್ಯವಸ್ಥೆ ಹೆಚ್ಚು ಕಡಿಮೆ ಒಂದೇ ಬಗೆಯದೇ. ತುಳಿಯುವ ಪ್ರಸ್ತಾಪ ಬಂದಾಗ ಈ ಎರಡು ಬಣಗಳ ಪ್ರಯತ್ನಗಳು ಮತ್ತು ಕ್ರಿಯೆಗಳು ಒಟ್ಟಾಗಿ ಒಂದಾಗಿ ಬಿಡುತ್ತವೆ.

ಒಂದಷ್ಟು ಮಂದಿ ಶಾಶ್ವತವಾಗಿ ಬಹುಶಃ ಪ್ರತಿ ಊರಿನಲ್ಲಿದ್ದು, ಪ್ರತಿ 'ಹೊಸತ'ನ್ನು ಮುಂದೆ ಮುಂದೆ ಓಡಿ ತಬ್ಬಿ ಹಿಡಿದುಕೊಳ್ಳುತ್ತಾರೆ. ನಂತರ ಈ 'ಹೊಸ'ತರಿಂದ ತಮ್ಮ ವ್ಯಕ್ತಿತ್ವವನ್ನು ವೈಭವೀಕರಿಸಿಕೊಳ್ಳುವುದಷ್ಟೆ ಅಲ್ಲ, ಅದನ್ನು ಅಂದೋಲನ ಹಾಗೂ ಘೋಷಣೆಯನ್ನಾಗಿ ಪರಿವರ್ತಿಸಿ ಅದರ ನಿಜ ಸ್ವರೂಪವನ್ನು ಧ್ವಂಸಗೊಳಿಸಿಬಿಡುತ್ತಾರೆ. ಹೀಗೆ ಮಾಡಿದ್ದರ ಪರಿಣಾಮವನ್ನು ಉಣ್ಣುವವರು ಎಚ್ಚೆತ್ತ ಲೇಖಕರು ಹಾಗೂ ಸಕ್ರಿಯ ರಾಜಕೀಯ ನಾಯಕರು. ಅಲ್ಲದೆ ಭಯವೆಂಬ ಬಿಸಿಯ ಕಾವಿಗೆ ಇವರೆಲ್ಲ ಕರುಕಾಗಿ ಬಿಡುತ್ತಾರೆ.

ದುಡ್ಡಿರಲಿಲ್ಲ. ಹಸಿವಿನಿಂದಿರುತ್ತಿದ್ದ ಮಕ್ಕಳನ್ನು ನೋಡಿ ನಾನೂ ಬಿಕ್ಕಳಿಸಿ ಅಳುತ್ತಿದ್ದೆ. ಆಗ, ಸತ್ಯದೇವ ಶಾಂತಿಪ್ರಿಯ ಎಂಬ ನನ್ನ ಸ್ನೇಹಿತ ನನಗೆ ತುಂಬಾ ಸಹಾಯ ಮಾಡಿದ. ಅವನ ಸಹಾಯವನ್ನು ಜೀವನ ಪರ್ಯಂತ ನಾನು ಮರೆಯುವಂತಿಲ್ಲ. ಆತ ತನ್ನ ಬಂಧುಗಳ ಮನೆಯಲ್ಲಿ ನನಗೆ ಆಶ್ರಯ ಕೊಡಿಸಿದ. ಆ ಮನೆಯ ಒಡತಿ ಶಾಂತಿಪ್ರಿಯನಂತೆಯೇ ದಯಾಮಯಿ. 'ನಿಮಗೆ ಕೈ ತುಂಬ ಸಂಬಳ ಸಿಕ್ಕಿದಾಗ ಎಲ್ಲ ಬಾಡಿಗೆಯನ್ನು ಒಟ್ಟಿಗೆ ಕೊಡಿ. ಮಧ್ಯೆ–ಮಧ್ಯೆ ನಾನು ನಿಮಗೆ ತೊಂದರೆ ಕೊಡುವುದಿಲ್ಲ' ಎಂದು ಆಕೆ ಹೇಳಿದಳು.

ಅಷ್ಟು ಹೊತ್ತಿಗೆ ರಾಮಚಂದ್ರ ಭಾರಧ್ವಜ ಮತ್ತು ಚಕ್ರಧರ ಎಂಬುವರು ನನ್ನ ಸ್ನೇಹಿತರಾಗಿದ್ದರು. ಇವರು ಕೂಡ ನನಗೆ ಸಾಕಷ್ಟು ಸಹಾಯ ನೀಡಿದರು. ಈ ಮೂವರೂ ಸೇರಿ ರೇಷನ್ ಮತ್ತು ಬಾಡಿಗೆ ಹಣದ ವ್ಯವಸ್ಥೆ ಮಾಡಿದರು. ನಾನು ಒಂದೇ ಸಮನೆ ಎಷ್ಟೋ ದಿನಗಳವರೆಗೆ ನನ್ನ ಮಕ್ಕಳಿಗೆ ವಂಚಿಸಿಕೊಂಡು ಬಂದಿದ್ದೇನೆ. ಲೋಹಾನೀಪುರದಿಂದ ಸುಮಾರು ಹನ್ನೆರಡು ಗಂಟೆಗೆ ಮನೆಯಿಂದ ಹೊರಟೆನೆಂದರೆ ಸಾಕು ಮಕ್ಕಳು ಕೇಳುತ್ತಿದ್ದರು—'ಅಪ್ಪಾಜಿ, ಎಲ್ಲಿಗೆ ಹೋಗ್ತಿದ್ದೀರಿ ? ಅಕ್ಕಿ ತರ್ತೀರಲ್ಲ ?' ತುಂಬಿ ಬಂದ ಕಣ್ಣುಗಳಿಂದ ಅವರತ್ತ ನೋಡಿ ಸುಳ್ಳು ಹೇಳುತ್ತಿದ್ದೆ–'ಹೌದು ಮಕ್ಕಳೆ, ಅಕ್ಕಿ ತಗೊಂಡು ಬೇಗ ಬಂದ್ ಬಿಡ್ತೀನಿ' ಅಂತ. ಆದರೆ ನಾನು ಬೇಗನೆ ಬರುತ್ತಿರಲಿಲ್ಲ. ರಾತ್ರಿ ಹತ್ತು–ಹನ್ನೊಂದು ಗಂಟೆಗೆ ಮುಂಚೆ ಹಿಂತಿರುಗಿ ಮನೆಗೆ ಎಂದೂ ಬಂದವನಲ್ಲ. ಅಷ್ಟು ಹೊತ್ತಿಗೆ ಮಕ್ಕಳು ಮಲಗಿರುತ್ತಿದ್ದವು. ಹೆಂಡತಿ ಅವಕ್ಕೆ ಏನನ್ನು ತಿನ್ನಲು ಕೊಡುತ್ತಿದ್ದಳೋ ದೇವರಿಗೇ ಗೊತ್ತು. ಇದೆಲ್ಲ ಗೊತ್ತಿದ್ದು–ಗೊತ್ತಿದ್ದು ನಾನು ಬೇಕೆಂದೇ ಏನೊಂದನ್ನು ಮಾತನಾಡದೆ ಮೌನವಾಗಿ ಬಂದು ಪಕ್ಕದಲ್ಲಿ ಮಲಗಿಬಿಡುತ್ತಿದ್ದೆ. ಹೆಂಡತಿ ಎಚ್ಚರವಾಗಿಯೇ ಇರುತ್ತಿದ್ದಳು. ಲೋಹಾನೀಪುರದ ಜನ ಶೈತ್ಯ ಮಾರುತ ಮತ್ತು ಪ್ರಕೃತಿಯ ಪ್ರಕೋಪವನ್ನು ಶಮನಗೊಳಿಸುವಂತೆ ಲೌಡ್‌ಸ್ಪೀಕರಿನಲ್ಲಿ ಅಖಂಡ ಕೀರ್ತನೆಗಳನ್ನು ಹೇಳುವುದರ ಮೂಲಕ ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಈ ಅಖಂಡ ಕೀರ್ತನೆಯಿಂದ ತನ್ನ ಬದುಕಿನ ಬಡತನವೂ ಕಡಿಮೆಯಾದೀತು ಎಂಬ ನಂಬಿಕೆ ನನ್ನ ಹೆಂಡತಿಗೂ ಇತ್ತು. ಲೋಹಾನೀಪುರದ ದಾಸ್ ಕಂಪನಿಯ ಮುಂದಿನ ರಸ್ತೆಯನ್ನು ನೆನೆಸಿಕೊಂಡರೆ ಅಳು ಬರುತ್ತದೆ. ಆ ರಸ್ತೆಯಲ್ಲಿ ನಿಂತು ನನ್ನ ಚಿಕ್ಕಮಗ ಜೋರಾಗಿ ಕಿರುಚಿ ಹೇಳುತ್ತಿದ್ದ : 'ಅಪ್ಪಾಜಿ, ಅಕ್ಕಿ ಗೋಧಿ ತರದಿದ್ದರೂ ಚಿಂತೆಯಿಲ್ಲ ಇವತ್ತು ಬ್ರೆಡ್ ಆದರೂ ತೆಗೆದುಕೊಂಡು ಬನ್ನಿ. ರಾತ್ರಿ ನನಗೆ ಹೊಟ್ಟೆ ಹಸಿಯುತ್ತೆ.' ಆಮೇಲೆ ನನ್ನ ಮನೆಯ ಒಡತಿ ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದಳು. ಆಕೆ ನನ್ನ ಮಗನಿಗೆ ಬ್ರೆಡ್ ಕೊಟ್ಟಿರಬಹುದು ಎಂಬುದನ್ನು ಕಲ್ಪಿಸಿಕೊಂಡರೆ ಸಾಕು, ಮನಸ್ಸಿಗೆ ನೆಮ್ಮದಿ ಸಂತೋಷ ಸಿಗುತ್ತಿತ್ತು.

ಏಳು ದಿನಗಳ ಒಳಗಾಗಿ ಪ್ರಳಯವಾಗುತ್ತದೆ ಎಂದು ಮೊಹಲ್ಲಾದ ಹುಡುಗರು, ಹೆಂಗಸರು ಮುದುಕರು ಎಲ್ಲರೂ ಹೆದರಿದ್ದರು. ಎಲ್ಲರೂ ಈ ಭಯದಿಂದಾಗಿ ಕೀರ್ತನೆಗಳಿಗೆ ಹೋಗುತ್ತಿದ್ದರು. ನನ್ನ ಹೆಂಡತಿ ತನ್ನ ನೋವಿನಲ್ಲೂ ಅದರೊಂದಿಗೆ ಒಂದಾಗಿದ್ದಳು. ಹರತಾಳದ ನಂತರ ನನ್ನ ಎಲ್ಲ ಸಂಬಳ ಕೈಗೆ ಬಂದಾಗ ನನ್ನ ಹೆಂಡತಿ ಮುಗುಳ್ನಗುತ್ತ ಇದೆಲ್ಲ ಕೀರ್ತನೆಯ ಫಲ ಎಂದಳು. ಪ್ರಳಯ ಮತ್ತು ಶೈತ್ಯಮಾರುತದ ಭಯವೂ ದೂರವಾಗಿತ್ತು. ನಮ್ಮ ಬೆವರಿನ ಕೂಲಿಯೂ ಲಭ್ಯವಾಯಿತು. ನಮ್ಮೆಲ್ಲರ ಸಂಬಳ ಬಟವಾಡೆ ಮಾಡಿದ ದಿವಸವೇ ರಾಜಾ ಬಹದ್ದೂರ್ ಪ್ರೆಸ್ ಮತ್ತು ಪತ್ರಿಕೆಯನ್ನು ಮುಚ್ಚಿದರು. ನಾವು ಹದಿನೈದು–ಹದಿನಾರು ಜನ ಒಟ್ಟಿಗೆ ಇನ್ನೊಮ್ಮೆ ನಿರುದ್ಯೋಗಿಗಳಾದೆವು.

ನನ್ನ ಕಷ್ಟ-ಪಾಡುಗಳು ಹೇಗೋ ಏನೋ ತಂದೆಯ ಕಿವಿಗೂ ಬಿದ್ದು ಅವರು ನಮ್ಮನ್ನು ಮನೆಗೆ ಕರೆಸಿಕೊಂಡರು. ಅಲ್ಲಿ ಊಟ ಹೇಗೋ ಸಾಗುತ್ತಿತ್ತಾದರೂ ಅವರ ಪ್ರೀತಿ ಮಾತ್ರ ಸಿಗುತ್ತಿರಲಿಲ್ಲ ಅವರು ನನ್ನೊಂದಿಗೆ ಮಾತನಾಡುತ್ತಿರಲಿಲ್ಲ, ಸಾಯುವ ದಿನದವರೆಗೂ ಅವರು ನನ್ನೊಂದಿಗೆ ಮಾತನಾಡಲಿಲ್ಲ, ಅವರ ಸಾವು ಆಕಸ್ಮಿಕವೇ ಯಾವುದೇ ಕಷ್ಟವನ್ನನುಭವಿಸಲಿಲ್ಲ. ಮಲಿದನಂತೆಯೇ ಇದ್ದರು. ಮನೆಯಲ್ಲಿ ರಾತ್ರಿ ಎಲ್ಲರೊಡನೆ ಮಾತನಾಡಿಕೊಂಡು ಮಲಗಲು ಹೋದರು. ಬೆಳ ಎದ್ದು ನೋಡಿದರೆ ಸದಾಕಾಲಕ್ಕೆ ನಮ್ಮೆಲ್ಲರನ್ನು ಬಿಟ್ಟು ಅವರು ಹೋಗಿಬಿಟ್ಟಿದ್ದರು. ಅವರನ್ನು ನೆನಸಿಕೊಂಡು ನಾನು ಸಹ ತುಂಬಾ ಅತ್ತಿದ್ದೆ. ಹೀಗೆ ಅಳುವಾಗ ನಾವು ಅನುಭವಿಸಿದ್ದ ಎಲ್ಲ ಕಷ್ಟ ಕೋಟಲೆಗಳು ಕಣ್ಣುಗಳ ಮುಂದೆ ಸಾಕಾರಗೊಳ್ಳುತ್ತಿದ್ದವು. ಸಾಯುವ ದಿನವೂ ನನ್ನ ತಂದೆ ನನ್ನ ಜೊತೆ ಎರಡು ಮಾತುಗಳನ್ನಾಡಲಿಲ್ಲ ಎಂದು ನನಗೆ ತುಂಬ ದುಃಖವಾಗುತ್ತಿತ್ತು. ಅವರು ಸತ್ತ ದಿನದಿಂದಲೇ ನನ್ನ ಮೇಲೆ ವಿಪತ್ತುಗಳ ಮಳೆಯೇ ಆಗಲಾರಂಭಿಸಿತು. ಚಿಕ್ಕಪ್ಪಂದಿರು, ನೆಂಟರಿಷ್ಟರು ಪೀಡಿಸಲಾರಂಭಿಸಿದರು. ಅದೃಷ್ಟವಶಾತ್ ಅಷ್ಟು ಹೊತ್ತಿಗೆ ಒಂದು ಸ್ಕೂಲಿನಲ್ಲಿ ನನಗೆ ಅಧ್ಯಾಪಕನ ನೌಕರಿ ಸಿಕ್ಕಿ ಅದರಿಂದ ತಿಂಗಳಿಗೆ 165 ರೂ. ಕೈಗೆ ಬರುತ್ತಿತ್ತು.

ಒಂದು ದಿನ ನನ್ನ ಕಿರಿಯ ಚಿಕ್ಕಪ್ಪ ಹೇಳಿದರು : 'ನಿಮ್ಮಪ್ಪ ಒಬ್ಬ ರಾಕ್ಷಸ ಶೈತಾನ್. ಅವನು ನನ್ನೊಂದಿಗೆ ಅಪ್ರಮಾಣಿಕವಾಗಿ ನಡೆದುಕೊಂಡ. ಆ ಸೇಡನ್ನು ನಿನ್ನ ಮೇಲೆ ತೀರಿಸಿಕೊಳ್ಳುತ್ತೇನೆ' ಚಿಕ್ಕಪ್ಪನ ಅಸಭ್ಯ, ಮನುಷ್ಯತ್ವವಿಲ್ಲದ ವ್ಯವಹಾರಗಳಿಂದ ಹೆಂಡತಿ, ಅಮ್ಮ, ಮಕ್ಕಳು ಸದಾ ಭಯಗ್ರಸ್ಥರಾಗಿಯೇ ಇರುತ್ತಿದ್ದರು. ಯಾವಾಗ ಮೇಲೆ ಬೀಳುತ್ತಾನೋ ಯಾರಿಗೆ ಗೊತ್ತು ! ಹಳ್ಳಿಯ ಜನರ ಬಳಿ ಹೋಗಿ ಆತ ನನ್ನ ಬಗ್ಗೆ ಇಲ್ಲ ಸಲ್ಲದ ಚಾಡಿ ಮಾತುಗಳನ್ನು ಹೇಳಿ ಕಿವಿ ತುಂಬುತ್ತಿದ್ದ. ಬಡತನದ ಗರ್ಭದಲ್ಲಿ ಮುಲುಗುಟ್ಟುವ ಹಳ್ಳಿ ಜನರ ಈರ್ಷ್ಯೆ, ರಾಗ-ದ್ವೇಷ ಒಂದೇ ಸಮನೆ ಗೋಧಿ ನಾಗರಹಾವಿನಂತೆ ಬುಸುಗುಟ್ಟುತ್ತಲೇ ಇರುತ್ತಿದ್ದವು. ಇಲ್ಲಿರುವ ಯಥಾರ್ಥ ಸ್ಥಿತಿಗಳನ್ನು ಹೇಗೆ ಸ್ವೀಕರಿಸಿ ಅನುಭವಿಸಬೇಕೆಂಬುದೇ ಅರ್ಥವಾಗುತ್ತಿಲ್ಲ. ಸಾಹಿತ್ಯಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅಷ್ಟೆ, ಅಲ್ಲಿನ ಜಗಳಗಂಟಿ ಸ್ನೇಹಿತರನ್ನು ಹಾಯ್ದು ಹೋಗುವುದೆಂದರೆ ಅದು ಇನ್ನೂ ಪ್ರಯಾಸ[illegible] ಕೆಲಸ. ಸ್ಥಳೀಯ ರಾಜಕೀಯ ! ಆರಾಮ[illegible] ಅನುಭವಿಸುತ್ತ ಬೌದ್ಧಿಕ ಕ್ರಾಂತಿಗಳ ಬ[illegible] ನಾಯಕರು ಲೇಖಕ ಗುಂಪಿಗೂ ನುಗ್ಗಿ ಬಂದಿದ್ದಾ[illegible] ನನ್ನ ಚಿಕ್ಕಪ್ಪ ಹಾಗೂ ಈ ಜನಗಳ ರೂಪಸ್ವರೂ[illegible] ಗಳಲ್ಲಿ ಯಾವ ಅಂತರವೂ ಕಾಣಿಸುವುದಿಲ್ಲ ಎ[illegible] ಒಂದೆ. ಈ ಇಬ್ಬರು ಒಂದೇ ರಾಜಕೀಯ ಕುತ[illegible]

ಒಂದು ಕಾಲ್ಪನಿಕ ವಾಸ್ತವ ಕತೆ

ಜಾತಿಯೂ ಮತ್ತು ಬ್ರಾಹ್ಮಣರೂ

ಅದು ಹಿಂದಿನ ಕಾಲ; ಜಾತೀಯ ಕತ್ತಲೆಯಿಂದ ಕೂಡಿದ ಕಾಲ. ಈಗಿನ ಹಾಗೆ ಆಗಲೂ ಗುಲಾಮರೂ ಅವರ ದಣಿಗಳೂ ಇದ್ದರು. ಭೂಮಾಲೀಕರೂ ಗೇಮೆದಾರರೂ ಇದ್ದರು. ದುಡಿಯದೆ ತಿಂದು ಕೊಬ್ಬಿದವರೂ, ಹಸಿವಿನಿಂದ ಸಾಯುವ ಸ್ಥಿತಿಗೆ ತಲುಪಿದವರೂ ಇದ್ದರು. ಹೀಗಿದ್ದವರೂ ದುಡಿಯಬೇಕಾದವರು ಹಸಿದವರು, ಇವರೆಲ್ಲರು ಕೂಡಿದ ಇಂಡಿಯಾದ ಪ್ರತಿರೂಪವಾದ ಇಂಥಾ ನಾಡಿಗೆ ಒಬ್ಬ ರಾಜ. ಆ ರಾಜನು ರೋಗ ಬಂದು ಸಾಯುವ ಸ್ಥಿತಿ ತಲುಪಿದ್ದನು. ಹೀಗಿರುತ್ತ ಮಕ್ಕಳಿಲ್ಲದ ಸದರಿ ರಾಜನು ತನ್ನ ಉತ್ತರಾಧಿಕಾರಿಯ ಮುಖ ನೋಡಿ ಸಾಯಲು ಬಯಸಿದನು. ಅದಕ್ಕಾಗಿ ಮಂತ್ರಿವರ್ಯರನ್ನು ಸೇರಿಸಿ ಅವರ ಸಲಹೆ ಕೇಳಿದನು. ಪಟ್ಟದಾನೆಗೆ ಹೂಮಾಲೆ ಕೊಡಿಸಿ, ಅದು ಯಾರ ಕೊರಳಿಗೆ ಹಾರ ತೊಡಿಸುವುದೋ ಅವರಿಗೆ ರಾಜ್ಯ ಕೊಟ್ಟು ರಾಜನನ್ನಾಗಿ ಮಾಡುವುದೆಂದು ಸಲಹೆ ಮಾಡಿದರು.

ರಾಜನಿಗೆ ಸ್ವಂತ ಆಲೋಚನಾ ಶಕ್ತಿಯಿಲ್ಲದ್ದರಿಂದ ಈ ಮಾತು ಒಪ್ಪಿತವಾಯಿತು. ಅವನು ಹಾಗೇ ಮಾಡಿದ. ಪಟ್ಟದಾನೆ ಹಾರ ಹಿಡಿದುಕೊಂಡು ಊರ ಬೀದಿಗಳಲ್ಲಿ ಮೆರವಣಿಗೆ ಹೊರಟಿತು. ಕೊನೆಗದು ರಾಜನ ಜೀತಗಾರನ ಕೊರಳಿಗೆ ಮಾಲೆ ಹಾಕಿ ತನ್ನ ಪಾಡಿಗೆ ಹೊರಟುಹೋಯಿತು. ಜೀತಗಾರನ ಕೈಗೆ ರಾಜ್ಯ ಬಂತು.

ಆ ರಾಜ್ಯದ ಒಂದು ಹಳ್ಳಿಯಲ್ಲಿ ಜನಿವಾರದವರ ಚಿಕ್ಕ ಗುಂಪೂ ಮತ್ತು ಬೀದಿ ಗುಡಿಸುವವರ ದೊಡ್ಡ ಗುಂಪೂ ಇದ್ದೂ-ಜಾತಿ ಅಸಮಾನತೆಗಳ ಆಧಾರದ ಮೇಲೇನೆ ಅವರು ಬದುಕುತ್ತಿದ್ದರು. ಹೊಲೆಯರ ಬಾವಿಯಲ್ಲಿ ನೀರು ಇಂಗಿಹೋಗಿತ್ತು. ಹಾರುವರ ಬಾವೀಲಿ ನೀರಿನೊರತೆ ಚಿಮ್ಮುತ್ತ ಇತ್ತು. ಹೊಲಗೇರಿಯ ಹತ್ತಾರು ಜನರು ನೀರಿಲ್ಲದೆ ಸತ್ತರು. ಇನ್ನೂ ಅನೇಕರು ಆಗಲೊ ಈಗಲೊ ಅಂತಿದ್ದರು.

ಕೊನೆಗೆ ಅಸ್ಪೃಶ್ಯರೆಲ್ಲ ಒಂದಾಗಿ ಬ್ರಾಹ್ಮಣರ ಹತ್ತಿರ ನೀರು ಕೇಳಲು ಹೋದರು.

ಅಸ್ಪೃಶ್ಯರು : ಮಾಸ್ವಾಮಿ ಅಡ್ಡಬಿದ್ದೊ ಹೋಗ್ತಿರೊ ಜೀವ ಉಳ್ಸಬೇಕು ದಣಿಗಳೆ'.

ಬ್ರಾಹ್ಮಣ ಮುಖಂಡ: ಅದೇನಪ್ಪ ನಿಮ್ಮ ಜೀವಕ್ಕೆ ಬಂದಿರೋದು ?

ಅಸ್ಪೃಶ್ಯರು : ನಿಮಗೆ ಗೊತ್ತಿದೆ ಬರಗಾಲ ಬಂದು ನಾವೆಲ್ಲ ಸಾಯ್ತಾ ಇದ್ದೀವಿ.

ಬ್ರಾ. ಮು : ಅದು ನಿಮ್ಮ ಹಣೆಬರಹ. ದೇವರ್ರೆ ನೀವು ನೀರಿಲ್ದೆ ಸಾಯಬೇಕು ಅಂತ ಮಾಡಿದ್ದಾನೆ.

ಅಸ್ಪೃಶ್ಯರು : ನೀವು ಒಂಚೂರು ನೀರು ಕೊಟ್ರೆ, ಬದುಕ್ಕೊತ್ತೀವಿ.

ಬ್ರಾ. ಮುಖಂಡ : ನಿಮಗೆ ನೀರು ಕೊಟ್ರೆ ನಮ್ಮ ಹಿಂದಲೇಳು ತಲೆಮಾರು ಮುಂದಲೇಳು ತಲೆಮಾರು ರೌರವ ನರಕಕ್ಕೋಗಬೇಕಾಗ್ತದೆ.

ಅಸ್ಪೃಶ್ಯರು : ಸ್ವಾಮಿ ನಾವೆಲ್ಲ ನೀರಿಲ್ದೆ ಸತ್ರೆ ನೀವೇ ಬೀದಿ ಗುಡಿಸೊ ಸ್ಥಿತಿ ಬರಬಹುದು

ಬ್ರಾ. ಮುಖಂಡ : ಎಲಾ ಸೂಳೇಮಕ್ಳಾ ಬೇಕಾದ್ರೆ ಈ ದೇಶದ ರಾಜ ಬಂದು ಬೀದಿ ಗುಡ್ಸಂಗೆ ಮಾಡ್ತೀವಿ, ನಾವಂತು ಗುಡ್ಸಲ್ಲ ತಿಳೀತಾ ?

ಮೇಲಿನ ರೀತಿ ಚರ್ಚೆ ನಡೆದು ಅಸ್ಪೃಶ್ಯರಿಗೆ ನೀರು ಸಿಗದಂತಾಯ್ತು. ಆದರಿಂದ ಬೇಸತ್ತ ಅವರು ಊರು ತೊರೆದು ಬೇರೆ ಊರಿಗೆ ವಲಸೆ ಹೋದರು. ಜಾತಿ 'ಅವಮಾನವನ್ನು ತಾಳಲಾರದೆ ಅವರ ಪೈಕಿ ಒಬ್ಬನು ಯಾರಿಗೂ ಗೊತ್ತಿಲ್ಲದಂತೆ ಬ್ರಾಹ್ಮಣರ ಬಾವಿಗೆ ಬಿದ್ದು ಸತ್ತನು. ನೀರೆಲ್ಲ ಹೊಲೆಯಾಯ್ತು. ಅದನ್ನು ತಿಳಿಯದೆ ಬ್ರಾಹ್ಮಣರು ಅದೇ ನೀರನ್ನು ಕುಡಿದರು. ಬಾವಿ ಕೊಳೆತು ನಾರಿದಾಗ ಮೇಲೆ ತೇಲಿದ ಅಸ್ಪೃಶ್ಯನ ಹೆಣ ಕಂಡು. ಬ್ರಾಹ್ಮಣರು ದಿಗ್ಭ್ರಾಂತರಾದರು. ತಮಗೆ ಎದುರಾದ ಸಮಸ್ಯೆಯನ್ನು ಬಗೆಹರಿಸಲು ಅವರು ದೇಶದ ರಾಜನನ್ನು ಕಂಡರು.

ಮಹಾಪ್ರಭು ನಮ್ಮನ್ನು ಕಾಪಾಡಬೇಕು-ರಾಜನ ಕಾಲಿಗೆ ಬ್ರಾಹ್ಮಣರು ಬಿದ್ದರು.

ರಾಜ : ಏನಾಗಿದೆ? ಏನು ನಿಮ್ಮ ತೊಂದರೆ ?

ಬ್ರಾಹ್ಮಣರು : ಹೊಲೆಯನೊಬ್ಬ ನಮ್ಮ ಬಾವಿಗೆ ಬಿದ್ದು ನಮ್ಮೆಲ್ಲರ ಕುಲ ಕೆಡಿಸಿದ್ದಾನೆ. ತಾವು ಅವನನ್ನು ಶಿಕ್ಷಿಸಬೇಕು. ರಾಜ : ಈಗ ಅವನೆಲ್ಲಿದ್ದಾನೆ ? ಬ್ರಾ : ಸತ್ತಿದ್ದಾನೆ ಪ್ರಭು.

ರಾಜ : ಸತ್ತವನನ್ನು ಶಿಕ್ಷಿಸುವುದು ಹೇಗೆ ?

ಬ್ರಾ : ಕ್ಷಮಿಸಿ ಪ್ರಭು ಅದುತಮಗೂ ಅಸಾಧ್ಯವಾದ ಕೆಲಸ. ಮತ್ತೇನಾದರೂ ಪರಿಹಾರ ಕೊಡಿಸಿ

ರಾಜ : (ಮಂತ್ರಿಗಳ ಕಡೆ ತಿರುಗಿ) ಇವರೆಲ್ಲ ಯಾಕಿಷ್ಟು ದುಃಖಿಸುತ್ತಿರುವರು ?

ಮಂತ್ರಿಗಳು : ಇವರು ಬ್ರಾಹ್ಮಣರು ಸ್ವಾಮಿ. ಜಾತಿ ಕೆಟ್ಟಿದೆಯೆಂಬ ದುಃಖ ಇವರಿಗೆ.

ರಾಜ : ಜಾತಿ ಹಾಗಂದ್ರೇನು ? ಇವರೆಲ್ಲ ಮನುಷ್ಯರಲ್ವ ?

ಬ್ರಾ : ಅಲ್ಲ ಸ್ವಾಮಿ ನಾವು ಬ್ರಾಹ್ಮಣರು !

ರಾಜ : ನಿಮ್ಮ ಬಟ್ಟೆಗಳು ಕೊಳೆಯಾದರೆ ಏನು ಮಾಡ್ತೀರಿ ?

ಬ್ರಾ : ನೀರಿನಿಂದ ತೊಳೆಯುತ್ತೇವೆಸ್ವಾಮಿ.

ರಾಜ : ನಿಮ್ಮ ದೇಹ ಕೊಳೆಯಾದರೆ ಏನು ಮಾಡ್ತೀರಿ ? ಬ್ರಾ: ಆಗ ಸ್ನಾನ ಮಾಡ್ತೀವಿ.

ರಾಜ : ಸರಿ ನೀರು ಕೊಳೆಯಾದರೆ ಯಾತರಿಂದ ತೊಳೀತೀರಿ ?

ಬ್ರಾ : ಗೊಗೊ ಗೊತ್ತಿಲ್ಲ ಸ್ವಾಮಿ ತಾವೇ ಅಪ್ಪಣೆ ಕೊಡಿಸಬೇಕು.

ರಾಜ : ನಿಮ್ಮ ಪೈಕಿ ಮೇಲ್ಜಾತಿಯಾವುದು ?

ಬ್ರಾಹ್ಮಣರು : ನಾವೇ ಸ್ವಾಮಿ ಬ್ರಾಹ್ಮಣರು.

ರಾಜ : ಕೀಳು ಜಾತಿಯವನೊಬ್ಬ ಬಿದ್ದು ನೀರು ಕೊಳಕಾಗಿದೆ ಅಲ್ವ ?

ಬ್ರಾಹ್ಮಣರು : ಹೌದು ಮಹಾಸ್ವಾಮಿ.

ರಾಜ : ಹಾಗಾದರೆ ಒಂದು ಕೆಲಸ ನ ತಿ ಮೇಲುಜಾತಿಯವನಾದ ಬ್ರಾಹ್ಮಣನೊಬ್ಬನನ್ನು ಅದೇ ಬಾವಿ ನೀರಿನಲ್ಲಿ ಮುಳುಗಿಸಿ ಕೊಲ್ಲಿರಿ. ಕೀಳು ಜಾತಿಯವನಿಂದ ಕೊಳಕಾದ ನೀರು ಮೇಲುಜಾತಿಯವನಿಂದ ಶುಚಿಯಾಗುವುದು.

ಬ್ರಾಹ್ಮಣರು ಯೋಚಿಸತೊಡಗಿದರು.

—ಮುಳ್ಳೂರು ನಾಗರಾಜ

ನನ್ನ ನೋವಿನ ಸಂಪುಟದಿಂದ

ಗಳನ್ನು ಮಾಡುತ್ತ 'ನೀನಲ್ಲದಿದ್ದರೇನಂತೆ ನಿಮ್ಮಪ್ಪ ನನಗೆ ಬೈದಿದ್ದ, ಒಂದು ದಿನ ನಿನ್ನನ್ನೂ ತಿಂದು ಕೇಳ್ತೇವೆ. ನಿನ್ನ ಹೆಸರು ಲೇಖಕ ಅಲ್ಲ, ಕೆಟ್ಟ ವ್ಯವಸ್ಥೆ ಅಂತ ಈ ಮಧುಕರಸಿಂಹ ಇದ್ದಾನಲ್ಲ, ಆವ ದಿಕ್ಕು ದೆಸೆಕಾಣದ ಪ್ರಾಣಿಯ ಹೆಸರು.

ಈಗ ನೀವೇ ಯೋಚಿಸಿ-ಬದುಕು ಎಷ್ಟೆಷ್ಟು ಹಾಗೂ ಎಂಥೆಂಥ ಸಂಘರ್ಷಗಳಿಂದ ಒಳಗೊಂಡಿದೆ ಅಂತ. ಮಗೆ ಬೇಕಾದ ಟೊಮೊಟೊ ಆಲೂಗಡ್ಡೆ ತಂದು ಕೊಡುವ ಜವಾಬ್ದಾರಿಯಿಂದ ಹಿಡಿದು ಮನುಷ್ಯನ ಎಲ್ಲ ಸಮಸ್ಯೆಗಳೊಂದಿಗೆ ಒಟ್ಟೊಟ್ಟಿಗೆ ಸೆಣಸಾಡಬೇಕಾದ ಪ್ರಸಂಗ ಬಂದಿದೆ-ಅದೂ ಒಂಟಿಯಾಗಿ. ಇಷ್ಟೆಲ್ಲ ಆದರೂ ಕೆಲವಾರು ಸ್ನೇಹಿತರ ಜೊತೆ ನಗುತ್ತ ಬದುಕು ಸಾಗಿಸುವ ಕೆಲಸ ಇದೆಯ್ಯಲ್ಲ, ಅದು ಅಷ್ಟು ಸುಲಭದ ಕೆಲಸವಲ್ಲ. ಆರು ಮಕ್ಕಳು, ಹೆಂಡತಿ ಮತ್ತು ತಾಯಿಯ ಜೊತೆ ಬೆಳಗಾದರೆ ಕಿರಿಕಿರಿ ಮಾಡುವ ನೌಕರಿಯ ಜೊತೆ ಬದುಕು ಸಾಗಿಸುತ್ತಿರುವ ನಾನು, ನನ್ನಂತೆಯೇ ಇರುವ ಅನೇಕ ಮಂದಿ ನಂಬುವಂತೆ ನಮಗೂ ಒಂದು ಕಾಲ ಬಂದೇ ಬರುತ್ತದೆ ಎಂಬ ನಂಬಿಕೆ ಇದೆ. ಯೋಗ್ಯನಾದ ಮನುಷ್ಯನೊಬ್ಬ ಈ ಭೂಮಿಯ ಒಡೆತನವನ್ನು ವಹಿಸಿಕೊಂಡಾಗ ಎಲ್ಲರ ನೋವು ಒಟ್ಟಿಗೆ ದೂರಾಗುತ್ತದೆ. (ಮುಗಿಯಿತು)

ಜನಿವಾರ ಎಂಬ ಜಾತಿಸರ್ಪ

ನನ್ನ ಸ್ನೇಹಿತ ಸ್ವಾಮಿಯು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿಯಲ್ಲಿದ್ದಾನೆ. ಅವನನ್ನು ಕಾಣಲು ಮಾರ್ಚ್ ೮೨ರಲ್ಲಿ ಹೋಗಿದ್ದೆ. ಸ್ನೇಹಿತ ಮೊದಲಿದ್ದ ಮನೆಯಲ್ಲಿರಲಿಲ್ಲ. ಜಾತಿ ಗೊತ್ತಾದ ಕಾರಣ ಮನೆಯವರು ಆತನನ್ನು ಖಾಲಿ ಮಾಡಿಸಿದ್ದರು. ಆತನ ಎರಡನೇ ವಿಳಾಸ ಹುಡುಕಿಕೊಂಡು ರಾತ್ರಿ ತಲುಪಿದೆ. ನನ್ನ ಕಂಡ ಕೂಡಲೇ ಹ್ಯಾಪನಗೆಯಾಡಿದ. ಶರಟಿನ ಮೂರು ಗುಂಡಿಗಳನ್ನು ಹಾಕದೆ ಎದೆ ಬಿಟ್ಟುಕೊಂಡು ತಿರುಗಾಡುತ್ತಿದ್ದ, ಇದ್ಯಾಕೆ 'ಇವನಿಗೇನು ಬಂತು?' ಎಂದು ಅಚ್ಚರಿಯಾಯ್ತು. ಮೂರೆಳೆ ಹಸಿನೂಲು ಹೊಸದಾಗಿ ಆತನೆದೆ ಮೇಲೆ ಮಲಗಿತ್ತು.

ಆತ ಮೊದಲ ಮನೆ ಬಿಟ್ಟುದರ ಹಿಂದಿನ ಹಗರಣವನ್ನು ವಿಚಾರಿಸಿಕೊಂಡೆ. ಹಿಂದಿನ ಮನೆಯೊಡತಿ ಲಿಂಗಾಯಿತರವಳು. ಒಂದು ದಿನ ಸ್ವಾಮಿಯು ಜಾತಿಯು ಸುಳಿವು ಸಿಕ್ಕಿ ಆಕೆ ರಾಕ್ಷಸಿಯಾದಳು. ಹುಚ್ಚಾಬಟ್ಟೆ ಬೈದ ಆಕೆ ನನ್ನ ಗೆಳೆಯನನ್ನು ಹೊಡೆಯಲು ತಯಾರಿದ್ದಳು. ಆದರೆ ಆತ ಅಲ್ಲಿಂದ ಹೇಗೋ ಪಾರಾದ. ಜಾತಿ ನೋವಿನಿಂದ ಬೇಸರಾದ ಆತ ಪ್ರಾಣ ತೊರೆದು ಕೊಳ್ಳಲು ತಯಾರಾದ. ರೈಲು ಕಂಬಿಗೆ ತಲೆ ಕೊಡಲು ಚಿಂತಿಸಿದ್ದ ; ಆದರೆ ಇತರ ಸ್ನೇಹಿತರ ಒತ್ತಾಯದಿಂದ ಅವನು ಬೇರೆ ಮನೆ ಮಾಡಿ ಹೀಗೆ ದಾರ ಧರಿಸಬೇಕಾದ ಸ್ಥಿತಿ ಬಂತು.

ನಾನು ಕ ಇಡ ಅಲ್ಲೇ ಉಳಿಯಬೇಕಾಗಿತ್ತು. ಆದರೆ ದಾರ ಧರಿಸಲು ನನಗಿಷ್ಟವಾಗಲಿಲ್ಲ. ನಾನು ಅಕ್ಕಪಕ್ಕದವರಿಗೆ ಗೌಡ ಅಂತೇಳಿಕೊಂಡೆ. ಅವರಲ್ಲನೇಕರು ಮಾಂಸಾಹಾರಿಗಳು ನನ್ನನ್ನು ಊಟಕ್ಕೆ ಕರೀತಿದ್ದರು. ನನ್ನ ತುಂಟ ಲಿಂಗಾಯಿತ ಸ್ನೇಹಿತ ಸುಳ್ಳು ಜಾತಿಯನ್ನು ನಿಜವಾಗಿಸಲು ಕಟ್ಟಾ ಸಸ್ಯಾಹಾರಿಯಾಗಿ ನಟಿಸುತ್ತಿದ್ದ. ಆದರೆ ನಾನು ಮಾಂಸ ತಿಂದು ಬಂದಾಗಲೆಲ್ಲ ಛೆ ನಾನು ಗೌಡನಾಗಬೇಕಿತ್ತು ಅಂತ ನಾಲಗೆ ಚಪ್ಪರಿಸಿಕೊಂಡು ಆಸೂಯೆಯಿಂದ ಕುದಿಯುತ್ತಿದ್ದ.

ಸುಳ್ಳು ಜಾತಿ ಹೇಳಿಕೊಂಡು ನಮ್ಮನ್ನೇ ನಾವು ವಂಚಿಸಿಕೊಂಡು ಬದುಕಬೇಕಾದ ಈ ದುಃಸ್ಥಿತಿ ಎಂದು ನಾಶವಾಗುತ್ತದೆ ಎಂಬ ಆತಂಕ ಮತ್ತು ಚಿಂತೆ ಇಂದಿಗೂ ನನ್ನದಾಗಿದೆ.

—ಹೆಚ್. ಎನ್. ಕಾರ್ಯಪ್ಪ ಹಾನಗಲ್ಲು

ಬೂಟುಗಾಲಿನ ಸಪ್ಪಳದ ನಡುವೆ

ನೋಡು ಗೆಳೆಯಾ
ನಿನ್ನಪ್ಪುಗೆ
ಆಪ್ಯಾಯಮಾನ ಸಾಮಿಪ್ಯ
ಪೋಲಿ ಭಾವನೆಗಳು
ಸ್ವಚ್ಛಂದ
ಬದುಕಿಗೆ ಮುಕ್ತವಾಗಿ ತೆರದುಕೊಳ್ಳುವುದು
ಎಲ್ಲ ಇವೆಲ್ಲ
ರುಚಿಸುವಂತದ್ದೇ ನನಗೆ
ಆದರೆ ಗೆಳೆಯಾ.:....
ಹುಲ್ಲುಗಾವಲುಗಳು ತೊಟ್ಟ
ಮಂಜಿನಿಬ್ಬನಿಗಳ ಒರೆಸಿಹಾಕುವ
ಬೂಟುಗಾಲಿನ ಸಪ್ಪಳಗಳ
ನೆನೆದರೆ ಸಾಕು
ನನ್ನೆದೆ ಸಾವಿರ ಚೂರು

—ಮಧುಮತಿ

ನೊಂದ ದಲಿತರ ನೆಲೆಕೀಳಲು ಜಮೀನುದಾರರ ಸನ್ನಾಹ

ಸೋಮವಾರಪೇಟೆ ತಾಲ್ಲೂಕು ಶನಿವಾರ ಸಂತೆ ಹೋಬಳಿ ದೊಡ್ಡಮಳ್ತೆ ಗ್ರಾಮದಲ್ಲಿ ವಿವಿಧ ಕಡೆಗಳಿಂದ ಬಂದ 30 ಕುಟುಂಬಗಳು ಅರ್ಧ ಎಕರೆ ಜಮೀನಿನಲ್ಲಿ ಗುಡಿಸಲು ಹಾಕಿಕೊಂಡು ಹತ್ತುವರ್ಷಗಳಿಂದ ಬಡ ದಲಿತರು ಕೂಲಿ ಜೀವನ ನೂಕುತ್ತಿದ್ದಾರೆ. ಇವರಿಗೆ ಇರುವ ಜಮೀನು ಸಾಲದೆ ಕೂಲಿ ಕಂಬಳ ಮಾಡಲು ಪ್ಲ್ಯಾಂಟರ್ ಹತ್ತಿರ ಕೆಲಸಕ್ಕಾಗಿ ದಿನ ನಿತ್ಯ ಹೋಗುತ್ತಿದ್ದಾರೆ. ಇಲ್ಲಿ ತಮಿಳಿನವರು, ಮಲಯಾಳಿಗಳು, ಗೌಡರು, ಹರಿಜನರು ನೆಲೆಸಿದ್ದಾರೆ.

ಇಷ್ಟು ವರ್ಷಗಳು ಚಕಾರ ಎತ್ತದೆ ಇದ್ದ ಜಮೀನುದಾರರು (ಪ್ಲಾಂಟರ) ಇಂದು ಈ ಬಡಪಾಯಿಗಳನ್ನು ಇಲ್ಲಿಂದ ಬಿಟ್ಟು ಓಡಿಸಲು ಕೊಲೆ ಬೆದರಿಕೆ ಹಾಕಲು ಸತತ ಪ್ರಯತ್ನ ನಡೆಸುತ್ತಿದ್ದಾರೆ.

ತಾಲ್ಲೂಕಿನ ತಹಸೀಲ್ದಾರ್ ಸಹಾ ಜೂನ್ 15 ರಂದು ಈ ಗ್ರಾಮಕ್ಕೆ ಭೇಟಿ ನೀಡಿದ್ದಲ್ಲದೆ ಇವರು ವಾಸಿಸುವ ಗುಡಿಸಲು ಹತ್ತಿರ ಹೋಗದೆ, ಜಮೀನುದಾರರ ಜೊತೆಗೂಡಿ ದೂರದಲ್ಲಿಯೇ ನಿಂತು ನೀವುಗಳೆಲ್ಲ ಇನ್ನು 15 ದಿನಗಳೊಳಗೆ ಇಲ್ಲಿಂದ ಖಾಲಿಯಾಗಬೇಕು ಇಲ್ಲದಿದ್ದಲ್ಲಿ ನಾವೇ ಖುದ್ದಾಗಿ ಬಂದು ನಿಂತು ಈ ಜನರ ಕೈಯಲ್ಲಿಯೇ ಗುಡಿಸಲುಗಳನ್ನು ನೆಲಸಮ ಮಾಡುವುದೆಂದು ಹೆದರಿಕೆ ಹಾಕಿ ಹೋಗಿದ್ದಾರೆ.

ಈ ಬಡ ದಲಿತರಿಗೆ ಯಾವ ಕ್ಷಣದಲ್ಲಿ ನಮ್ಮಗಳ ಮನೆಗೆ ಬೆಂಕಿ ಬೀಳುವುದೆಂಬ ಭಯ ಆವರಿಸಿ ತತ್ತರಿಸುತ್ತಿದ್ದಾರೆ. ಬಡವರ ಬಗ್ಗೆ ಬೊಗಳೆ ಭಾಷಣ ಬಿಗಿಯುವ ರಾಜಕಾರಣಿಗಳಾಗಲಿ ರಕ್ಷಣೆ ನೀಡುವ ಪೋಲೀಸು ಇಲಾಖೆಯಾಗಲಿ ಇದರ ಬಗ್ಗೆ ಕಿಂಚಿತ್ ಗಮನ ಹರಿಸಿಲ್ಲ. ಇವರೆಲ್ಲ ಜಮೀನುದಾರರ ಜೊತೆಗೂಡಿ ಇವರ ಪಾಲಿಗೆ ಯಮಘಂಟಕರಾಗಿದ್ದಾರೆ.

ಕೆಂದೇಗಾಲ ಶಿವಣ್ಣ

ಕೊಡಗು ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು 15 ರಂದು ಇಲ್ಲಿಗೆ ಭೇಟಿ ನೀಡಿ ಇದು ಯಾರ ಸ್ವತ್ತು ಅಲ್ಲ. ನೀವು ಯಾರ ಮನೆಯಲ್ಲಿ ಕಳ್ಳತನ, ದರೋಡೆ ಮಾಡಿಲ್ಲ. ನೀವು ಬಂದು ನೆಲೆಸಿ ಹತ್ತು ವರ್ಷಗಳಾಗಿವೆ. ಈ ಭೂಮಿಯಿಂದ ಬಿಟ್ಟು ಓಡಿಸುವ ನೈತಿಕ ಹಕ್ಕು ಯಾರಿಗೂ ಇಲ್ಲ. ನಿಮಗೆ ಯಾವ ಸಾಗುವಳಿ ಬೇಕಿಲ್ಲ. ನೀವು ಕಟ್ಟಿರುವ ಗುಡಿಸಲು, ಬೆಳೆಸಿರುವ ಮರ ಗಿಡಗಳೇ ಸಾಕು ಸಾಗುವಳಿಗೆ ಆಧಾರ. ನೂರಾರು ಎಕರೆ ಜಮೀನುಳ್ಳವರನ್ನು ಈ ಸರ್ಕಾರ ಪ್ರಶ್ನಿಸುತ್ತಿಲ್ಲ. ಬರೀ ಅರ್ಧ ಎಕರೆ ಜಮೀನಿದ್ದವನನ್ನು ಪ್ರಶ್ನಿಸುತ್ತಿದೆ. ಇದರ ಅರ್ಥ ಇಂದು ಆಡಳಿತ ವರ್ಗ ಇರುವುದು ಶ್ರೀಮಂತರ ಉದ್ಧಾರಕ್ಕಾಗಿ ನೀವು ಹಿಡಿದಿರುವ ಅಲ್ಪ ಸ್ವಲ್ಪ ಜಮೀನನ್ನು ಊರ ಒಡವೆ (ಊರಿಗೆ ಮೀಸಲಾದದ್ದು) ಎಂದು ಕುತಂತ್ರಹೂಡಿನಿಮ್ಮನ್ನು ಇಲ್ಲಿಂದಹೊರದೂಡಲು ನಿಮ್ಮಲ್ಲಿ ಭಯ ಭೀತಿ ತುಂಬುತ್ತಿದ್ದಾರೆ. ಇದಕ್ಕೆ ಯಾರು ಹೆದರಬಾರದು. ಮನುಷ್ಯನಿಗೆ ಹುಟ್ಟು ಸಾವು ಒಂದೇ ಸಾರಿ ಆದ್ದರಿಂದ ನೀವುಗಳು ಜಾತಿ, ಮತ, ಧರ್ಮ, ಭಾಷೆ ಇಂತಹ ತಾರತಮ್ಯದ ವಿಷ ಬೀಜಗಳನ್ನು ಕಿತ್ತು ಹೊರಬಂದು ಎಲ್ಲರೂ ಒಗ್ಗಟ್ಟಾಗಿ ಇಂತಹ ದುಷ್ಟ ಶಕ್ತಿಗಳ ವಿರುದ್ಧ ಸಮಗ್ರ ಹೋರಾಟ ಮಾಡಬೇಕು. ಇಲ್ಲದಿದ್ದಲ್ಲಿ ಈ ಶೋಷಣೆ ನಿರಂತರವಾಗಿ ಮುಂದುವರಿಯುತ್ತಲೇ ಇರುತ್ತದೆ. ಯಾವ ಅಧಿಕಾರಿಗಳಾಗಲಿ, ರಕ್ಷಣೆ ನೀಡುವ ಪೋಲೀಸ್ ಇಲಾಖೆಯಾಗಲಿ, ರಾಜಕಾರಣಿಗಳಾಗಲಿ ನಮ್ಮ ಉದ್ಧಾರ ಮಾಡುವುದಿಲ್ಲ. ನಮ್ಮ ಉದ್ಧಾರ ನಾವೇ ಮಾಡಿಕೊಳ್ಳಬೇಕು. ನಮ್ಮಗಳಿಗೆ ಇದುವರೆಗೂ ತಾಳಿ ಸಾಕಾಗಿಹೋಗಿದೆ. ಬರೀ ಭಾಷಣ ಕೂಗುವುದರಲ್ಲೇ 35 ವರ್ಷ ಕಳೆದಿದ್ದೇವೆ. ಇನ್ನು ಉಳಿದಿರುವುದು ಕ್ರಾಂತಿಮಾರ್ಗ ಒಂದೇ. ಆದ್ದರಿಂದ ಎಲ್ಲಾ ಜನಾಂಗದ ಬಡವರು ಇಂದು ಒಂದಾಗಬೇಕೆಂದು ಸಂಚಾಲಕ ಜಯಪ್ಪ ಹಾನಗಲ್ ಕರೆಯಿತ್ತರು.

ಮಹಾರಾಷ್ಟ್ರದಲ್ಲಿ ಹೆಚ್ಚುತ್ತಿರುವ ದಲಿತರ ಕಗ್ಗೊಲೆಗಳು

1983 ಮಾರ್ಚ್‌ನಲ್ಲಿ ಮಹಾರಾಷ್ಟ್ರದ ಅಹ್ಮದ್ ನಗರ ಜಿಲ್ಲೆಯ ಅಕೋಲಾ ತಾಲೂಕಿನ ಕೋಟುಳ್ ಗ್ರಾಮದ ದಲಿತರ ಒಂದುಗುಂಪು ಮುಂಬಯಿಯ ಹುತಾತ್ಮ ಚೌಕದಲ್ಲಿ ಕೆಲವು ಬೇಡಿಕೆಗಳನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹವನ್ನಾಚರಿಸಿತು. ಅಕೋಲಾದಲ್ಲಿ ನಡೆಯುತ್ತಿರುವ ದಲಿತರ ಕೊಲೆ ಅದರಲ್ಲೂ ಕಳೆದ ಎರಡು ವರ್ಷಗಳಿಂದ ವಿಪರೀತವಾಗಿರುವ ದಲಿತರ ಕೊಲೆಗಳ ಬಗ್ಗೆ ಮಹಾರಾಷ್ಟ್ರ ಸರಕಾರವು ತನಿಖೆ ನಡೆಸಲು ಒತ್ತಾಯಿಸುವುದು ಅದರ ಮುಖ್ಯ ಬೇಡಿಕೆಯಾಗಿತ್ತು. ಈ ವಿಷಯವು ವಿಧಾನ ಸಭೆಯಲ್ಲಿ ಪ್ರಸ್ತಾಪವಾಯಿತು. ಅಲ್ಲದೆ ಪ್ರಜಾಸತ್ತೆಯ ಹಕ್ಕುಗಳ ರಕ್ಷಣಾ ಸಮಿತಿಯು (CPDR) ಒಂದು ಅಧ್ಯಯನ ತಂಡವನ್ನು ಗ್ರಾಮಕ್ಕೆ ಕಳುಹಿಸಿತು.

ಮರಾಠರು, ಸರಪಂಚರು, ಪೋಲೀಸ್‌ಪಾಟೀಲ ಮತ್ತು ದೊಡ್ಡ ಜಮೀನ್ದಾರರು ಗ್ರಾಮದಪ್ರಭಾವಿ ವ್ಯಕ್ತಿಗಳು. ಇವರಿಗೆ ಪ್ರತಿಯಾಗಿ ತಕ್ಕಮಟ್ಟಿಗೆ ವಿದ್ಯಾವಂತರಾದ ದಲಿತರು ಕೊಲೆಗಳ ಬಗ್ಗೆ ಪ್ರಶ್ನಿಸುವಂತಾಗಿದ್ದಾರೆ. ತಮ್ಮ ಕಳೆದು ಕೊಂಡಿದ್ದ ಹೊಲಗಳನ್ನು ಮರಳಿ ಪಡೆಯಲು ದಲಿತರು ಹಣ ಹೊಂಚಿಸುತ್ತಿರುವುದರಿಂದ ಭೂವಿವಾದವೇರ್ಪಟ್ಟು ಬಹುತೇಕ ಕಡೆ ದಲಿತರ ಕೊಲೆಗಳಿಗೆ ಕಾರಣವಾಗಿದೆ. ನೀರಾವರಿಯಿಂದಾಗಿ ಇಂದು ಆ ಜಮೀನುಗಳ ಬೆಲೆ ಗಗನದೆತ್ತರ.

1982ರ ಮೇ ನಲ್ಲಿ ಶ್ರೀ ಭಗವತ್ ಸಾಳ್ವೆಯೆಂಬ ಜನಪ್ರಿಯ ದಲಿತ ಯುವಕನ ಕೊಲೆಯಾದ ಮೇಲಂತೂ ಗ್ರಾಮವು ಭಯದಿಂದ ತತ್ತರಿಸಿದೆ, ಈಗ ಭಗವತ್‌ನ ಸಹೋದರ ಶ್ರೀ ಜಯವಂತ್ ಸಾಳ್ವೆ ದಲಿತರ ಅನುಮಾನಾಸ್ಪದ ಸಾವುಗಳನ್ನೊಳಗೊಂಡಂತೆ ತಮ್ಮ ಸಹೋದರನ ಕೊಲೆಯ ನಿತಖೆಯ ಮುಂಚೂಣಿಯಲ್ಲಿದ್ದಾರೆ,

ಶ್ರೀ ಭಗವತ್ ಸಾಳ್ವೆಯ ಶವಪರೀಕ್ಷೆ ಮಾಡಿದ ವೈದ್ಯರು ಹಾಗೂ ಪೋಲೀಸರು ಅದು ಆಕಸ್ಮಿಕ ಸಾವು ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ ಖಾಸಗಿಯಾಗಿ ಅದು ಕೊಲೆಯೆಂತಲೂ, ಆರೋಪಿಗಳನ್ನು ಬಂಧಿಸುವ ಸ್ಥಿತಿಯಲ್ಲಿ ತಾವು ಇಲ್ಲ ಎಂತಲೂ ಪೋಲೀಸರೇ ಒಪ್ಪಿಕೊಳ್ಳುತ್ತಾರೆ. ಗ್ರಾಮಸ್ಥರ ಅಭಿಪ್ರಾಯದಲ್ಲಿ ದಲಿತರ ಮತ್ತು ಮರಾಠರ ನಡುವಿನ ತೊಡಕಿನ ಸಂಬಂಧವೇ ಶ್ರೀ ಭಗವತ್ ಸಾವಿಗೆ ಕಾರಣವಾಗಿದೆ.

ಶ್ರೀ ಭಗವತ್ ಅವರ ಕೊಲೆಗೆ ಮುಂಚೆ ಕೆಲವು ಘಟನೆಗಳು ನಡೆದವು. ಮೊದಲನೆಯದಾಗಿ ಕೋಟುಳ್‌ನ ನೆರೆಗ್ರಾಮ ಐಸ್ಸೆವಾತಿಯಲ್ಲಿ ದಲಿತ ಮಹಿಳೆಯೊಬ್ಬಳ ಮೇಲೆ ಗ್ರಾಮ ಸರಪಂಚನ ತಮ್ಮನಿಂದ ಅತ್ಯಾಚಾರ ನಡೆದಾಗ ಸಾಳ್ವೆ ಸಹೋದರರಿಂದ ಉಗ್ರವಾಗಿ ಪ್ರತಿಭಟಿಸಲ್ಪಟ್ಟಿತು. ಎರಡನೆಯದಾಗಿ ಸಾಳ್ವೆಯವರ ನಿಕಟವರ್ತಿಯೂ ಮರಾಠ ಜಮೀನ್ದಾರನೂ ಆಗಿದ್ದ ಶ್ರೀ ರಾಮನಾಥ ಲೋಖಂಡೆ ಎಂಬವರ ಕೊಲೆಯಾಯಿತು. ಪ್ರಮುಖ ಆರೋಪಿಯಾಗಿದ್ದ ಹಿಂದುಳಿದ ಜಾತಿಗೆ ಸೇರಿದ ಜಾತ್‌ವೆ ಎಂಬವರನ್ನು ಪೋಲೀಸರು ಕಂಡು ಕಂಡೂ ಬಂಧಿಸಲಿಲ್ಲ. ಈ ಅಂಶವನ್ನು ಸಾರ್ವತ್ರಿಕಗೊಳಿಸಿದ್ದು ಶ್ರೀ ಭಗವತ್ ಸಾಳ್ವೆ. ಮೂರನೆಯದಾಗಿ ಪಂಚಾಯಿತಿ ರಾಜಕೀಯದಲ್ಲಿ ಭಗವತ್ ಸಾಳ್ವೆಯದು ಸಕ್ರಿಯ ಪಾತ್ರ. ಹದಿನೈದು ವರ್ಷಗಳಿಂದ ನಿರಂತರವಾಗಿ ಸರಪಂಚನಾಗಿ ಮುಂದುವರೆದಿದ್ದ ಮುರಳಿ ದೇಶಮುಖ್ ಎಂಬುವವರನ್ನು ಸೋಲಿಸಿ ಪ್ರಥಮಬಾರಿಗೆ ದಲಿತರೊಬ್ಬರನ್ನು ಸರಪಂಚನನ್ನಾಗಿಯೂ ಮುಸ್ಲಿಮರೊ

ಗುರುರಾಜ ಬೀಡಿಕರ್

ಬ್ಬರನ್ನು ಉಪಸರಪಂಚನನ್ನಾಗಿಯೂ ಮಾಡಿಸಿದ ಕೀರ್ತಿ ಶ್ರೀ ಭಗವತ್ ಸಾಳ್ವೆಯದು.

ಸಧ್ಯಕ್ಕೆ ಹಳ್ಳಿಗೆ ಇಬ್ಬರಂತೆ ಹವಾಲ್ದಾರರು ಕಾವಲಿದ್ದಾರೆ. ಪೋಲೀಸರ ಸಂಖ್ಯೆಯಲ್ಲಿ ಹೆಚ್ಚಳ ಮಾಡುವುದರಿಂದಲೂ ಸಮಸ್ಯೆ ಬಗೆಹರಿಯದು. ಶ್ರೀ ಮಹಾಳೆ ಎಂಬ ಹಿರಿಯ ಕ್ರಿಮಿನಲ್ ಲಾಯರ್ ಒಬ್ಬರು 'ಇಲ್ಲಿನ ಎಲ್ಲ ಪೋಲೀಸರನ್ನೂ ಕಿತ್ತು ಹಾಕಬೇಕು. ಇವರೆಲ್ಲ ಅಪರಾಧಿಗಳ ಜೇಬಿನಲ್ಲಿದ್ದಾರೆ' ಎನ್ನುತ್ತಾರೆ.

ಪೋಲೀಸರ ಬೇಜವಾಬ್ದಾರಿತನವನ್ನು ಎಲ್ಲ ಹಂತಗಳಲ್ಲೂ ಕಾಣಬಹುದಾಗಿದೆ. ದೂರುಗಳನ್ನು ಹಿಡಿಯುವುದಿಲ್ಲ ; ಕೊಲೆಯ ಸ್ಥಳಕ್ಕೆ ಧಾವಿಸುವಲ್ಲಿ ವಿಳಂಬ ; ರುಜುವಾತುಗಳು ದೊರೆಯುವೆಡೆಯಲ್ಲಿ ಬೇಕೆಂದೇ ಉದಾಸೀನ ; ರಕ್ತದ ಸ್ಯಾಂಪಲ್, ರಕ್ತಸಿಕ್ತ ಬಟ್ಟೆಗಳು ಅಷ್ಟೆ ಏಕೆ ಶ್ರೀ ಭಗವತ್ ಕೊಲೆಯಲ್ಲಿ ಪ್ರತ್ಯಕ್ಷ ಸಾಕ್ಷಿಗಳನ್ನು ಕೂಡ ತಾತ್ಸಾರ ಮಾಡಿದರು ; ಹೆಣ ಕೊಳೆಯುತ್ತಿದ್ದರೂ ಪಂಚನಾಮೆ ಮಾಡುವುದಿಲ್ಲ ; ಕೊಲೆಗಳನ್ನು ತಡೆಯಬಹುದಾದ ಕಡೆ ಬೇಕೆಂತಲೆ ಕರ್ತವ್ಯ ವಿಮುಖರಾಗುವುದು (ಶ್ರೀ ಲೋಖಂಡೆ ಪ್ರಕರಣದಲ್ಲಿ ನಡೆದದ್ದು ಹೀಗೆಯೆ). ಇನ್ನು ಪೋಲೀಸ್ ಪಾಟೀಲ ಕೂಡ ಜಮೀನ್ದಾರರ ಪಾಳೆಯದವ. ಒಬ್ಬ ದಲಿತ ಯುವಕನು ಪೋಲೀಸ್ ಪಾಟೀಲನ ಕೆಲಸಕ್ಕೆ ಅರ್ಜಿ ಹಾಕಿದರೆ ಅದು ತಿರಸ್ಕಾರಗೊಳ್ಳುವಂತೆ ನೋಡಿಕೊಂಡದ್ದಷ್ಟೆ ಅಲ್ಲದೆ ಜಮೀನ್ದಾರರ ಗೂಂಡಾಗಳಿಂದ ಅವನನ್ನು ಥಳಿಸಲಾಯಿತು.

ಬಹಳಷ್ಟು ಸಾವುಗಳು ಸಂಭವಿಸಿರುವುದು ಹಾವು ಕಡಿತ, ನೀರಲ್ಲಿ ಮುಳುಗಿ ಮುಂತಾದ ಆಕಸ್ಮಿಕಗಳಿಂದ ಎಂದು ಶವಪರೀಕ್ಷೆ ಮಾಡದೆ ಪೋಲೀಸರು ಪ್ರತಿಪಾದಿಸುತ್ತಾರೆ. ಡಾ. ವೈರಡ್ಗೆ ಎಂಬ ವೈದ್ಯ 10 ವರ್ಷಗಳಿಂದಲೂ 'ಇಂಥ' ಅಸಹಜ ಸಾವುಗಳ ಪಂಚನಾಮೆಯನ್ನು ಮಾಡುತ್ತ ಬಂದಿದ್ದಾರೆ. ವರ್ಗವಾದಾಗ್ಯೂ ಸಹ ವೈರಡ್ಗೆ ಇಲ್ಲಿಯೆ ಉಳಿಯಲು ರಹಸ್ಯ ಕಾರಣಗಳಿವೆ. ಇವರೊಂದಿಗೆ ಯಾವ ಸಂಬಂಧವೂ ಇರದ ಅಕೋಲಾ ಪ್ರಜೆಗಳು, ವಕೀಲರು, ಕೆಲವು ಪೋಲೀಸರು ಸಹ ಇವರ ಭ್ರಷ್ಟ ನಡತೆಯ ಬಗ್ಗೆ ಹೇಳುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಗೌರ್ ಹೇಳುವ ಪ್ರಕಾರ ಶ್ರೀ ಭಗವತ್ ಸಾಳ್ವೆ ಸತ್ತದ್ದು ಕುಡಿದ ಅಮಲಿನಲ್ಲಿ ಬಾವಿಗೆ ಬಿದ್ದುದರಿಂದ. ಕಾರಣ ಅವರು ರಾಸಾಯನಿಕ ವಿಶ್ಲೇಷಣೆಯ ವರದಿಗಾಗಿ ಕಾಯುತ್ತಿದ್ದಾರೆ. ವೈರೆಡ್ಗೆ ರಕ್ತದ ಮಾದರಿಯನ್ನೇ ಕಳಿಸಿರಲಿಲ್ಲ ಹಾಗೂ ಹೊಟ್ಟೆಯೊಳಗಣ ಪದಾರ್ಥಗಳನ್ನು ಸಹ ಶೇಖರಿಸಿಟ್ಟಿರಲಿಲ್ಲ.

ಒಟ್ಟಿನಲ್ಲಿ ಎರಡು ಸ್ಪಷ್ಟ ಹೇಳಿಕೆಗಳಿವೆ: ಒಂದು ದಲಿತ ಗ್ರಾಮಸ್ಥರದು, ಇನ್ನೊಂದು ಪೋಲೀಸ್, ಸರಪಂಚ, ವೈದ್ಯ ಮತ್ತು ಶಾಸಕರ ಒಕ್ಕೂಟದ್ದು.

ದಲಿತರು ಹೇಳುವುದು ಜಮೀನ್ದಾರ್-ಪೋಲೀಸ್ ಮೈತ್ರಿಯಿಂದಾಗಿ ತಾವು ಸಂಪೂರ್ಣ ಅಧೀರರೂ ಅಸಹಾಯಕರೂ ಆಗಿದ್ದೇವೆ. ಒಕ್ಕೂಟ ಹೇಳುವುದು ಗ್ರಾಮದಲ್ಲಿ ಯಥೇಚ್ಚ ಪೋಲೀಸ್ ರಕ್ಷಣೆ ಇದೆ, ಯಾರೂ ಅಭದ್ರತೆಯಿಂದ ಇಲ್ಲ, ಜಾತೀಯ ಭಾವನೆಗಳು ಕಿಂಚಿತ್ತೂ ಇಲ್ಲ.

ಸಿ ಪಿ ಡಿ ಆರ್ ಭೇಟಿ ನೀಡಿದ ಹಳ್ಳಿಗಳಲ್ಲಿ ಕೊಲೆ ಆರೋಪಿಗಳು ಮುಕ್ತವಾಗಿ ತಿರುಗಾಡುತ್ತಿರುವುದು ಕಂಡುಬಂದಿದೆ. ಶ್ರೀ ಜಯವಂತ್ ಸಾಳ್ವೆಯ ಸತತ ಪ್ರಯತ್ನದಿಂದಾಗಿ ಮಾರ್ಚ್ 11ರಿಂದ ಹೆಚ್ಚು ಕಡಿಮೆ ಎರಡು ವರ್ಷಗಳ ನಂತರ ಶ್ರೀ ಲೋಖಂಡೆ ಸಾವಿನ ಬಗ್ಗೆ ಸಿ ಐ ಡಿ ತನಿಖೆ ಪ್ರಾರಂಭವಾಗಿದೆ. ಇನ್ನು ಇತರ ಸಾವುಗಳ ತನಿಖೆಗಾಗಿ ಕಾದು ನೋಡಬೇಕು.

(ಆಧಾರ : ದಿ ಸಂಡೆ ಅಬ್‌ಸರ್ವರ್)

KRNN 106 PANCHAMA Fortnightly 5, July 1983 Reg. No. 2561-76

ಸಾಮಾಜಿಕ ಬಹಿಷ್ಕಾರದ ವಿರುದ್ಧ ಸಿಡಿದ ಪ್ರತಿಭಟನೆ



ಎಂಟು ತಿಂಗಳ ಭಹಿಷ್ಕಾರದ ನರಕಕ್ಕೆ ಧಿಕ್ಕಾರ

ಜಾತ್ಯಾಂಧರ ಕಣ್ಣಲ್ಲಿ ಪಶು ಪ್ರಾಣಿಗಳಿಗಿಂತ ಕೀಳಾಗಿ ಬದುಕುತ್ತಿರುವ ದಲಿತರು ಇದೀಗ ತಾನೆ ಕಣ್ಣು ಬಿಡತೊಡಗಿದ್ದಾರೆ. ದಲಿತ ಸಂಘರ್ಷ ಸಮಿತಿಯಂಥ ಎಚ್ಚೆತ್ತ ದಲಿತ ಸಂಘಟನೆ ನೀರು ನೆರಳಿಲ್ಲದ ಅವಮಾನಿತ ದಲಿತರಲ್ಲಿ ಸ್ವಾಭಿಮಾನದಿಂದ ಬದುಕುವ ಕೆಚ್ಚನ್ನು ಕಲಿಸತೊಡಗಿದೆ. ಮತ್ತು ಜಾತಿ-ಉಪಜಾತಿ ಗುಂಪುಗಳಾಗಿ ಛಿದ್ರವಾಗಿ ಹೋಗಿರುವ ನೊಂದ ಜಾತಿ ಮನುಷ್ಯರೆಲ್ಲ ದಲಿತ ಸಂಘರ್ಷ ಸಮಿತಿ ಅಡಿಯಲ್ಲಿ ಒಂದಾಗಿ ಇದೀಗ ತಮಗಾಗುತ್ತಿರುವ ಜಾತಿ ಅವಮಾನಗಳ ವಿರುದ್ಧ ಹೋರಾಡಲು ಬೀದಿಗಿಳಿಯುತ್ತಿದ್ದಾರೆ.

ಚಿತ್ರದಲ್ಲಿ : ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮುಂಡರಗಿ ಗ್ರಾಮದ ದಲಿತರೆಲ್ಲ ಕೂಡಿ ತಮ್ಮ ಮೇಲೆ ಗ್ರಾಮದ ಸವರ್ಣೀಯರು ಕಳೆದ 8 ತಿಂಗಳಿಂದ ಹಾಕಿದ್ದ ಸಾಮಾಜಿಕ ಬಹಿಷ್ಕಾರವನ್ನು ಪ್ರತಿಭಟಿಸುತ್ತಿದ್ದಾರೆ. ಸವರ್ಣಿಯರೊಬ್ಬರು ಸತ್ತ ಸುದ್ದಿಯನ್ನು ದಲಿತರು ಬೇರೆ ಊರಿಗೆ ಕೊಂಡೊಯ್ಯಲು ನಿರಾಕರಿಸಿದ ಕಾರಣಕ್ಕಾಗಿ ದಲಿತರಿಗೆ ಈ

• ಬಹಿಷ್ಕಾರ ! ಬಹಿಷ್ಕಾರದ ಸಮಯದಲ್ಲಿ ಸವರ್ಣಿಯರ ಬರ್ಬರ ಕೃತ್ಯಗಳಿಗೆ ತಲ್ಲಣಿಸಿ ಕೂಲಿ ಸಿಗದೆ ಹಸಿವು ತಾಳಲಾರದೆ ಗುಲಬರ್ಗಾ ಜಿಲ್ಲೆಯ ಶಾಹಾಬಾದಿಗೆ ಕೆಲವು ಸಂಸಾರಗಳು ವಲಸೆ ಹೋಗಬೇಕಾಯಿತು. ನಿಜಾಮರ ಕಾಲದಲ್ಲಿ ತೋಡಿಸಿದ ಬಾವಿ ಒಂದು ದಲಿತರ ಕೇರಿಯಲ್ಲಿದ್ದು ಬೇಸಿಗೆಯಲ್ಲಿ ಒಣಗಿ ಹೋದದ್ದರಿಂದ ಕುಡಿಯುವ ನೀರಿನಿಂದಲೂ ದಲಿತರು ವಂಚಿತರಾದರು. ಸಂತೆಯಲ್ಲಿಯೂ ಸಹ ಇವರಿಗೆ ದಿನನಿತ್ಯದ ಸಾಮಾನು ದೊರೆಯದಂತಾಯ್ತು. ಹೆಣ್ಣುಮಕ್ಕಳು ಹೋಗಿ 'ನಾವೇನು ಮಾಡಿದ್ದೇವೆ ? ನೀವು ಈ ರೀತಿ ಚಿತ್ರಹಿಂಸೆ ಕೊಡುವುದಕ್ಕಿಂತ ನಮ್ಮನ್ನು ಕೊಂದುಬಿಡಿರಿ' ಎಂದು ಗೋಗರೆದರು. ಆದರೆ ಸವರ್ಣೀಯರ ಎದೆ ಕರಗಲಿಲ್ಲ. ಬಹಿಷ್ಕಾರ ನಿಲ್ಲಲಿಲ್ಲ. ಆದರೆ ತಡವಾಗಿಯಾದರೂ ದಲಿತ ಸಂಘರ್ಷ ಸಮಿತಿ ಮುಂಡರಗಿಗೆ ಕಾಲಿಟ್ಟು ದಲಿತರಲ್ಲಿ ಸ್ವಾಭಿಮಾನ ತುಂಬಿ ಇಂಥ ಅವಮಾನಗಳ ವಿರುದ್ಧ ಅನಿವಾರ್ಯವಾಗಿ ನಡೆಯಬೇಕಾದ ಹೋರಾಟಕ್ಕೆ ಅಣಿಗೊಳಿಸಿತು.

6-6-83ರಂದು ರಾಯಚೂರಿನಲ್ಲಿ ನಡೆದ ಎಚ್ಚೆತ್ತ ದಲಿತರ ಪ್ರತಿಭಟನೆಯ ಫಲವಾಗಿ 8 ತಿಂಗಳಿಂದಲೂ ಸಾಮಾಜಿಕ ಬಹಿಷ್ಕಾರವನ್ನು ಕಣ್ಣುಮುಚ್ಚಿ ನೋಡುತ್ತಾ ಕುಳಿತಿದ್ದ ಜಾಲಹಳ್ಳಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಈಗ ಸಸ್ಪೆಂಡ್ ಆಗಿ ಕುಳಿತಿದ್ದಾನೆ. ಮತ್ತು ಸವರ್ಣಿಯರ ಹಂಗಿಲ್ಲದಂತೆ ಬದುಕುವಂತಾಗಲು ದಲಿತರಿಗೆ ಕಾಮಗಾರಿ ಕೆಲಸಗಳನ್ನು ಸರ್ಕಾರ ಮಂಜೂರು ಮಾಡಿದೆ.

ಬಾಳ್ಳುಪೇಟೆ ಶಾಂತಿ ಸಂಧಾನ

(ಮೊದಲ ಪುಟದಿಂದ)

ಕೇಳಿಕೊಂಡು "ಶಾಂತಿ"ಯುತವಾಗಿ ಬದುಕುತ್ತಿದ್ದ ಹೊಲೆ ಮಾದಿಗರು ಈಗ ಮನುಷ್ಯರಂತೆ ಮಾತಾಡತೊಡಗಿದ್ದುದು ಹಣ. ಜಾತಿಗಳಿಂದ ಕುರುಡಾದ ಪ್ಲಾಂಟರುಗಳ ಕಣ್ಣಿಗೆ ಕಾರದ ಪುಡಿ ಎರಚಿದಂತಾಗಿತ್ತು. ಕೆಲವರು ಆವೇಶದಿಂದ "ಇವರು ಹಿಂದಿನಂತೆ ಸಹಬಾಳ್ವೆಯಿಂದ ಇರುವುದಾದರೆ ನಾವು ಶಾಂತಿಗೆ ಸಿದ್ಧ" ಎನ್ನುತ್ತಿದ್ದರು. ಆದರೆ ಹಿಂದಿನಂತೆ ಪ್ರಾಣಿಗಳಿಗಿಂತ ಕೀಳಾಗಿ ಬದುಕುವಂಥ "ಸಹಬಾಳ್ವೆ"ಯ ಜೀವನ ದಲಿತರಿಗೆ ಬೇಕಿರಲಿಲ್ಲ. ಜಾತಿ, ಅಸ್ಪೃಶ್ಯತೆಯ ಅವಮಾನಗಳ ಪೊರೆಯನ್ನು ಕಳಚಿಕೊಂಡು ಎಲ್ಲರೂ ಮನುಷ್ಯರಂತೆ ಬಾಳುವ 'ಸಹಬಾಳ್ವೆ' ದಲಿತರಿಗೆ ಬೇಕಾಗಿತ್ತು. ಹಾಸನ ಜಿಲ್ಲೆಯ ದಲಿತರ ಉಸುರಿನಂತಿರುವ ದಲಿತ ಸಂಘರ್ಷ ಸಮಿತಿಯು ತ್ಯಾಗಿ ಪ್ಲಾಂಟರುಗಳಿಗೆ "ಜಾತಿ-ಮತ-ಹಣ-ಅಹಂಕಾರಗಳ ಬಿಟ್ಟು ಸ್ವಲ್ಪ ಮನುಷ್ಯರಾಗಿ" ಎಂದು ಕೇಳಿಕೊಂಡು ಅವರು ಚಿಂತಿಸುವಂತೆ ಮಾಡಿದರು. ಚಿಂತಿಸಿದ ಪ್ಲಾಂಟರುಗಳು ಕೊನೆಗೂ "ನಮ್ಮ ಮೇಲಿರುವ ಎಲ್ಲಾ ಪೋಲೀಸ್ ಕೇಸುಗಳನ್ನು ತೆಗೆದುಹಾಕಿದರೆ ಮಾತ್ರ ಶಾಂತಿಗೆ ನಾವು ಸಿದ್ಧ" ಎಂದು ಪಟ್ಟು ಹಾಕಿದರು. ಆದರೆ ಪಟ್ಟು ಗೆಲ್ಲಲಿಲ್ಲ. ಕೊಲೆ-ಹಲ್ಲೆ ಕೇಸುಗಳಲ್ಲಿ ಯಾರೇ ಸಿಕ್ಕಿದ್ದರೂ ಅವರನ್ನು ಶಿಕ್ಷಿಸುವುದು ಸೂಕ್ತವೆಂದೂ ಸಣ್ಣಪುಟ್ಟ ಕೇಸುಗಳಲ್ಲಿ ಸಿಕ್ಕವರನ್ನು ಬಿಡಬಹುದೆಂದು ನಿರ್ಣಯಿಸಿ ಮುಂದೆ ಗಲಾಟೆ ಸಂಭವಿಸದಂತೆ ನೋಡಿಕೊಳ್ಳಲು ಶಾಂತಿ ಸಮಿತಿ ನೇಮಿಸಲಾಯಿತು.

ಇದಕ್ಕೆ ಪ್ಲಾಂಟರುಗಳೂ ಒಪ್ಪಿ, ಕೊನೆಗೆ ಎಲ್ಲರೂ ಒಟ್ಟಿಗೆ ತಿಂಡಿ ತಿಂದು ಎಲ್ಲರ ಮುಖದಲ್ಲೂ ಪ್ರೀತಿಯ ನಗೆ ಮೂಡಿದಾಗ ಇಡೀ ಸಭೆ ಒಂದೇ ಮನುಷ್ಯನಂತೆ ಕಂಡಿತು.

ಅಂತೂ ನಾಲ್ಕು ತಿಂಗಳ ನಂತರವಾದರೂ ಬಾಳ್ಳುಪೇಟೆಯಲ್ಲಿ ಶಾಂತಿನೆಲೆಸಲು ತೀವ್ರ ಪ್ರಯತ್ನ ನಡೆಸಿದ ಶ್ರೀ ರಮೇಶ ಜಿಗಜಿಣಗಿ ಮತ್ತು ರಮೇಶ ಬಂದಗದ್ದೆಯವರಿಗೆ ವಂದಿಸುವ ನಾವು, ಬಾಳ್ಳುಪೇಟೆಯ ಪ್ಲಾಂಟರುಗಳಿಗೆ ಮತ್ತೊಮ್ಮೆ ತ್ಯಾಗಿಯವರ ಮಾತಲ್ಲೇ ಕೇಳುತ್ತಿದ್ದೇವೆ: "ದಯವಿಟ್ಟು ಇನ್ನಾದರೂ ಮನುಷ್ಯರಾಗಿ"

—ಸಂಪಾದಕ

ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಾಯ ಪ್ರಿಂಟರ್ಸ್, 2514, ಕೆ. ಜಿ. ಕೊಪ್ಪಲು, ಮೈಸೂರು-14.

ಈಗ ಪ್ರಕಟವಾಗಿವೆ

ಆಧುನಿಕ ಕನ್ನಡ ನಾಟಕ

ಲೇಖಕ : ಕೆ. ಮರುಳಸಿದ್ಧಪ್ಪ

ಬೆಲೆ : ರೂಪಾಯಿ ನಲವತ್ತು

ಈ ಶತಮಾನದ ನೂರು ಇಂಗ್ಲಿಷ್ ಕವನಗಳು

ರೂಪಾಂತರ : ರಾಮಚಂದ್ರಶರ್ಮ

ಬೆಲೆ : ಸಾದಾರಣ : ರೂಪಾಯಿ ಹದಿನಾರು
ಕ್ಯಾಲಿಕೊ : ಗೂಪಾಯಿ ಇಪ್ಪತ್ತೇಳು

ಮನೆ-ಮನಸ್ಸು

ಕಾದಂಬರಿ

ಲೇಖಕ : ಸಿ. ಆರ್. ಚಂದ್ರಶೇಖರ್

ಬೆಲೆ : ರೂಪಾಯಿ ಒಂಬತ್ತು

ತದ್ರೂಪಿ

ಲೇಖಕ : ಪ್ರಸನ್ನ

ಬೆಲೆ : ರೂಪಾಯಿ ಏಳು

ಷರ್ಲಾಕ್ ಹೋಮ್ಸ್‌ರ

ನಾಲ್ವರ ಸಂಕೇತ

ಕಾನನ್ ಡಾಯ್ಲ್‌ರ ಪತ್ತೆದಾರಿ ಕಾದಂಬರಿ

ಅನುವಾದ : ವಾಸುದೇವರಾವ್

ಬೆಲೆ : ರೂಪಾಯಿ ಹತ್ತು

ದುಡಿಯುವವರ ದನಿ ಮತ್ತು ಇತರ ಲೇಖನಗಳು

ಲೇಖಕ : ಎಸ್. ವೆಂಕಟರಾಮ್

ಬೆಲೆ : ರೂಪಾಯಿ ಹದಿನಾರು

ಸಾವು ಮತ್ತು ಇತರ ಕಥೆಗಳು

ಲೇಖಕ : ಬಿ. ಸಿ. ದೇಸಾಯಿ

ಬೆಲೆ : ರೂಪಾಯಿ ಒಂಭತ್ತು

ಲೇಖನಗಳು ಮತ್ತು ಮುನ್ನುಡಿಗಳು

ಲೇಖಕ : ಗೋಪಾಲಕೃಷ್ಣ ಅಡಿಗ

ಬೆಲೆ : ರೂಪಾಯಿ ಹದಿನೈದು

ಪ್ರಿಂಟರ್ಸ್ ಪ್ರಕಾಶನ
75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–5600 01